
Mettilotsava ‘26
ನಡಿ ನಡಿ ದೇವನ ಅಡಿ
Adi
Devana
Nadi
Nadi

ಭಾವಪ್ರಕಾಶಿಕಾ ಮೆಟ್ಟಿಲೋತ್ಸವ ೨೦೨೬ ಹಾಡುಗಳು

1. *ಹರಿಕಥಾಮೃತಸಾರ ಗುರುಗಳ* 4
2. *ಜಯಗಳು ಆಗಲಿ ಅಪಜಯಗಳು ಪೋಗಲಿ* 6
3. *ಗುರು ಮಧ್ವ ರಾಯರಿಗೆ ನಮೋ ನಮೋ ನಮ್ಮ* 7
4. *ಸತತ ಗಣನಾಥ ಸಿದ್ಧಿಯ ನೀವ ಕಾರ್ಯದಲಿ* 8
5. *ಸತ್ಯ ಜಗಕಿದು ಪಂಚ ಭೇದವು ನಿತ್ಯ ಶ್ರೀಗೋವಿಂದನ* 9
6. *ಮೊದಲೊಂದಿಪೆ ನಿನಗೆ ಗಣನಾಥ* 10
7. *ನಮಃ ಪಾರ್ವತೀ ಪತಿ ನುತಜನಪರ ನಮೊ ವಿರೂಪಾಕ್ಷ* 11
8. *ಪವಮಾನ ಪವಮಾನ ಜಗದ ಪ್ರಾಣ ಸಂಕರುಷಣ ಭವಭಯಾರಣ್ಯ ದಹನ* 12
9. *ವೀರ ಹನುಮ ಬಹು ಪರಾಕ್ರಮ* 13
10. *ಜಯ ಕೊಲ್ಹಾಪುರ ನಿಲಯೆ ಭಜಧಿಷ್ಟೇತರವಿಲಯೇ* 14
11. *ಹೊಸಗಣ್ಣು ಎನಗೆ ಹಚ್ಚಲಿಬೇಕು ಜಗದಂಬಾ* 15
12. *ವೆಂಕಟರಮಣನೆ ಬಾರೋ ಶೇಷಾಚಲವಾಸನೆ ಬಾರೋ* 16
13. *ವಾರಿಜಲಯಪತೆ ವಾರಿಜನಾಭನೆ ವಾರಿಜಭವಪಿತ ವಾರಿಜನೇತ್ರನೆ* 17
14. *ಬಂದಾನೋ ಗೋವಿಂದ ಚಂದದಿ ಆನಂದ* 18
15. *ಶ್ರೀನಿವಾಸ ನೀನೇ ಪಾಲಿಸೋ ಶ್ರಿತಜನ ಪಾಲ* 19
16. *ನಾರಾಯಣ ಗೋವಿಂದ - ನರಹರಿ* 20
17. *ಬಿಡೆನೋ ನಿನ್ನಂಘ್ರಿ ಶ್ರೀನಿವಾಸ ಎನ್ನ ದುಡಿಸಿಕೊಳ್ಳಲೋ ಶ್ರೀನಿವಾಸ* 22
18. *ಶ್ರೀನಿವಾಸಾ ಗೋವಿಂದಾ ಶ್ರೀ ವೇಂಕಟೇಶಾ ಗೋವಿಂದಾ* 23
19. *ಜೈ ಜೈ ರಾಮ ಹರೇ ಜೈ ಜೈ ಕೃಷ್ಣ ಹರೇ* 28
20. *ನಂದೇನದೋ ಸ್ವಾಮಿ ನಿಂದೇ ಇದೆಲ್ಲವೂ* 30
21. *ಸಿಂಹರೂಪನಾದ ಶ್ರೀ ಹರಿ ಹೇ ನಾಮಗಿರೀಶನೇ* 31
22. *ಸ್ತ್ರೀಯರೆಲ್ಲರು ಬನ್ನಿರೆ / ಶ್ರೀನಿವಾಸನ ಪಾಡಿರೇ* 32
23. *ಶ್ರೀ ವೇಂಕಟೇಶ ಸ್ತವರಾಜ* 36
24. *ನಿನ್ನ ಒಲುಮೆಯಿಂದ ನಿಖಿಳ ಜನರು ಬಂದು ಮನ್ನಿಸುವರೊ ಮಹರಾಯ* 39
25. *ನಿನ್ನ ದರುಶನಕೆ ಬಂದವನಲ್ಲವೊ* 40

26.	***ದಾಸೋಹಂ ತವ ದಾಸೋಹಂ ತವ***	*41*
27.	***ದಾಸನಾಗು ವಿಶೇಷನಾಗು***	*42*
28.	***ಕುರು ಭುಂಕ್ಷ್ವ ಚ ಕರ್ಮ ನಿಜಂ ನಿಯತಂ ಹರಿಪಾದ ವಿನಮ್ರ ಧಿಯಾ ಸತತಮ್***	*43*
29.	***ವಂದಿತಾಶೇಷ ವಂದ್ಯೋರು ವೃಂದಾರಕಂ***	*44*
30.	***ಅವನ ಶ್ರೀಪತಿ ರಪ್ರತಿ ರಧಿ ಕೇಶಾದಿ ಭವಾದೇ***	*47*
31.	***ಆನಂದ ಮುಕುಂದ ಅರವಿಂದ ನಯನ***	*49*
32.	***ಶ್ರೀ ಕೃಷ್ಣ ಗೋವಿಂದ ಹರೇ ಮುರಾರಿ ಹೇ ನಾಥ್ ನಾರಾಯಣ ವಾಸುದೇವ***	*50*
33.	***ಪ್ರಾತಃ ಗದ್ಯ (ಪುರಂದರ ದಾಸರು)***	*52*

ಭಾವಪ್ರಕಾಶಿಕಾ ಮೆಟ್ಟಿಲೋತ್ಸವ ೨೦೨೬ ಹಾಡುಗಳು

1. ಹರಿಕಥಾಮೃತಸಾರ ಗುರುಗಳ

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮ ಭಗವದ್ಭಕ್ತರಿದನಾದರದಿ ಕೇಳುವುದು ||

ಶ್ರೀರಮಣಿಕರಕಮಲ ಪೂಜಿತ ಚಾರುಚರಣ ಸರೋಜಬ್ರಹ್ಮ,
ಸಮೀರವಾಣಿ ಫಣೀಂದ್ರವೀಂದ್ರ ಭವೆಂದ್ರ ಮುಖವಿನುತ
ನೀರಜಭವಾಂಡೋದಯ ಸ್ಥಿತಿ ಕಾರಣನೆ ಕೈವಲ್ಯದಾಯಕ,
ನಾರಸಿಂಹನೆ ನಮಿಪೆ ಕರುಣಿಪುದೆಮಗೆಮಂಗಳವ ||1||

ಜಗದುದರನತಿವಿಮಲ ಗುಣರೂಪಗಳನಾಲೋಚನದಿ ಭಾರತ
ನಿಗಮತತಿಗಳತಿಕ್ರಮಿಸಿ ಕ್ರಿಯಾ ವಿಶೇಷಗಳ
ಬಗೆಬಗೆಯ ನೂತನವ ಕಾಣುತ ಮಿಗೆ ಹರುಷದಿಂಪೊಗಳಿ
ಹಿಗ್ಗುವ ತ್ರಿಗುಣಮಾನಿ ಮಹಾಲಕುಮಿ ಸಂತೈಸಲನುದಿನವು ||2||

ನಿರುಪಮಾನಂದಾತ್ಮ ಭವ ನಿರ್ಜರ ಸಭಾಸಂಸೇವ್ಯ
ಋಜುಗಣ-ದರಸೆ ಸತ್ವಪ್ರಚುರ ವಾಣೀಮುಖಸರೋಜೇನ
ಗರುಡ ಶೇಷ ಶಶಾಂಕದಳ ಶೇಖರರ ಜನಕ ಜಗದ್ಗುರುವೇ
ತ್ವಚ್ಚರಣಗಳಿಗೆ ಅಭಿವಂದಿಸುವೆ ಪಾಲಿಪುದು ಸನ್ಮತಿಯ||3||

ಆರುಮೂರೆರೆಡೊಂದು ಸಾವಿರ ಮೂರೆರೆಡು ಶತಶ್ವಾಸ ಜಪಗಳ
ಮೂರು ವಿಧ ಜೀವರೊಳಗಬ್ಜಜ ಕಲ್ಪ ಪರಿಯಂತ
ತಾ ರಚಿಸಿ ಸಾತ್ವರಿಗೆ ಸುಖ ಸಂಸಾರ ಮಿಶ್ರರಿಗೆ ಅಧಮಜನರಿಗ-
ಅಪಾರ ದುಃಖಗಳ ಈವ ಗುರು ಪವಮಾನ ಸಲಹೆಮ್ಮ||4||

ಚತುರವದನನ ರಾಣಿ ಅತಿರೋಹಿತ ವಿಮಲ ವಿಜ್ಞಾನಿ
ನಿಗಮ ಪ್ರತತಿಗಳಿಗಭಿಮಾನಿ ವೀಣಾಪಾಣಿ ಬ್ರಹ್ಮಾಣಿ
ನತಿಸಿ ಬೇಡುವೆ ಜನನಿ ಲಕ್ಷ್ಮೀಪತಿಯ ಗುಣಗಳ ತುತಿಪುದಕೆ
ಸನ್ಮತಿಯ ಪಾಲಿಸಿ ನೆಲೆಸು ನೀ ಮದ್ವದನ ಸದನದಲಿ||5||

ಕೃತಿರಮಣ ಪ್ರದ್ಯುಮ್ನನಂದನೆ ಚತುರವಿಂಶತಿ ತತ್ವಪತಿ
ದೇವತೆಗಳಿಗೆ ಗುರುವೆನಿಸುತಿಹ ಮಾರುತನ ನಿಜಪತ್ನಿ
ಸತತ ಹರಿಯಲಿ ಗುರುಗಳಲಿ ಸದ್ರತಿಯ ಪಾಲಿಸಿ
ಭಾಗವತ ಭಾರತ ಪುರಾಣ ರಹಸ್ಯ ತತ್ವಗಳ ಅರುಪು ಕರುಣದಲಿ ||6||

ವೇದಪೀಠ ವಿರಿಂಚಿ ಭವ ಶಕ್ರಾದಿಸುರ ವಿಜ್ಞಾನದಾಯಕ
ಮೋದ ಚಿನ್ಮಯ ಗಾತ್ರ ಲೋಕಪವಿತ್ರ ಸುಚರಿತ್ರ
ಛೇದ ಭೇದ ವಿಷಾದ ಕುಟಿಲಾಂತಾದಿ ಮಧ್ಯ ವಿದೂರ
ಸಾದ ಅನಾದಿ ಕಾರಣ ಬಾದರಾಯಣ ಪಾಹಿ ಸತ್ರಾಣ||7||

ಕ್ಷಿತಿಯೊಳಗೆ ಮಣಿಮಂತ ಮೊದಲಾದ ಅತಿ ದುರಾತ್ಮರು
ಒಂದಧಿಕ ವಿಂಶತಿ ಕುಭಾಷ್ಯವ ರಚಿಸೆ
ನಡುಮನೆಯೆಂಬ ಬ್ರಾಹ್ಮಣನ ಸತಿಯ ಜಠರದೊಳು ಅವತರಿಸಿ ಭಾರತೀರಮಣ
ಮಧ್ವಾಭಿದಾನದಿ ಚತುರದಶ ಲೋಕದಲಿ ಮೆರೆದ ಅಪ್ರತಿಮಗೊಂದಿಸುವೆ ||8||

ಪಂಚಭೇದಾತ್ಮಕ ಪ್ರಪಂಚಕೆ ಪಂಚರೂಪಾತ್ಮಕನೆ ದೈವಕ
ಪಂಚಮುಖ ಶಕ್ರಾದಿಗಳು ಕಿಂಕರರು ಶ್ರೀಹರಿಗೆ
ಪಂಚವಿಂಶತಿ ತತ್ವ ತರತಮ ಪಂಚಿಕೆಗಳನು ಪೇಳ್ದ
ಭಾವೀ ವಿರಿಂಚಿಯೆನಿಪ ಆನಂದತೀರ್ಥರ ನೆನೆವೆನನುದಿನವು ||9||

ವಾಮದೇವ ವಿರಿಂಚಿತನಯ ಉಮಾಮನೋಹರ ಉಗ್ರ ಧೂರ್ಜಟಿ
ಸಾಮಜಾಜಿನ ವಸನಭೂಷಣ ಸುಮನಸೋತ್ತಂಸ

ಕಾಮಹರ ಕೈಲಾಸ ಮಂದಿರ ಸೋಮಸೂರ್ಯಾನಲ ವಿಲೋಚನ
ಕಾಮಿತಪ್ರದ ಕರುಣಿಸೆಮಗೆ ಸದಾ ಸುಮಂಗಲವ ||10||

ಕೃತ್ತಿವಾಸನೆ ಹಿಂದೆ ನೀ ನಾಲ್ವತ್ತು ಕಲ್ಪಸಮೀರನಲಿ ಶಿಷ್ಯತ್ವವಹಿಸಿ
ಅಖಿಳ ಆಗಮಾರ್ಥಗಳೋದಿ ಜಲಧಿಯೊಳು
ಹತ್ತು ಕಲ್ಪದಿ ತಪವಗೈದಾದಿತ್ಯರೊಳಗುತ್ತಮನೆನಿಸಿ
ಪುರುಷೋತ್ತಮನ ಪರಿಯಂಕ ಪದವೈದಿದೆಯೋ ಮಹದೇವ||11||

ಪಾಕಶಾಸನ ಮುಖ್ಯ ಸಕಲ ದಿವೌಕಸರಿಗೆ ಅಭಿನಮಿಪೆ
ಋಷಿಗಳಿಗೇಕಚಿತ್ತದಿ ಪಿತೃಗಳಿಗೆ ಗಂಧರ್ವ ಕ್ಷಿತಿಪರಿಗೆ
ಆ ಕಮಲನಾಭದಿ ಯತಿಗಳ ನೀಕಕಾನಮಿಸುವೆನು ಬಿಡದೆ
ರಮಾಕಳತ್ರನ ದಾಸವರ್ಗಕೆ ನಮಿಪೆನನವರತ||12||

ಪರಿಮಳವು ಸುಮನದೊಳಗನಲನು ಅರಣಿಯೊಳಗಿಪ್ಪಂತೆ
ದಾಮೋದರನು ಬ್ರಹ್ಮಾದಿಗಳ ಮನದಲಿ ತೋರಿತೋರದಲೆ
ಇರುತಿಹ ಜಗನ್ನಾಥ ವಿಠಲನ ಕರುಣ ಪಡೆವ ಮುಮುಕ್ಷುಜೀವರು
ಪರಮ ಭಾಗವತರನು ಕೊಂಡಾಡುವುದು ಪ್ರತಿದಿನವು||13||

2. ಜಯಗಳು ಆಗಲಿ ಅಪಜಯಗಳು ಪೋಗಲಿ

ಜಯಗಳು ಆಗಲಿ ಅಪಜಯಗಳು ಪೋಗಲಿ
ಜಯದೇವಿ ರಮಣ ಒಲಿಯಲಿ ಕೋಲೆ
ಜಯದೇವಿ ರಮಣ ಒಲಿಯಲಿ ನಮ್ಮ
ವಿಜಯರಾಯರ ಕೀರ್ತಿ ಮೆರೆಯಲಿ ಕೊಲೆ||

ಹರಿಯೇ ಸರ್ವೋತ್ತಮ ಹರಿಯೇ ಪರದೇವತೆ
ಹರಿದಾಸರೆಂಬೋ ಬಿರುದಿನ ಕೋಲೆ
ಹರಿದಾಸರೆಂಬೋ ಬಿರುದಿನ ಹೆಗ್ಗಾಳೆ
ಹಿರಿಬಾಗಿಲೊಳು ನುಡಿಸೇವು ಕೋಲೆ||

ಪನ್ನಂಗ ಶಯನ ಸುಪರ್ಣ ವಾಹನ
ಸುಪರ್ಣ ವಾಹನ ಸುಖಪುರ್ಣ ಕೋಲೆ
ಸುಪರ್ಣ ವಾಹನ ಸುಖಪೂರ್ಣನಾದ
ಮೋಹನ್ನ ವಿಠ್ಠಲ ಕರುಣಿಸು ಕೋಲೆ ||

ಕೋಲು ಕೋಲೆ ರಂಗ ಕೋಲು ಕೋಲೆ
ಕೋಲು ಕೋಲೆ ಕೃಷ್ಣಾ ಕೋಲು ಕೋಲೆ ||

3. ಗುರು ಮಧ್ವ ರಾಯರಿಗೆ ನಮೋ ನಮೋ ನಮ್ಮ

ಗುರು ಮಧ್ವ ರಾಯರಿಗೆ ನಮೋ ನಮೋ ನಮ್ಮ
ಗುರು ಮಧ್ವ ಸಂತತಿಗೆ ನಮೋ ನಮೋ

ಶ್ರೀಪಾದರಾಜರಿಗೆ ಗುರು ವ್ಯಾಸರಾಜರಿಗೆ
ಗುರು ವಾದಿರಾಜರಿಗೆ ನಮೋ ನಮೋ

ರಾಘವೇಂದ್ರ ರಾಯರಿಗೆ ವೈಕುಂಠ ದಾಸರಿಗೆ
ಪುರಂದರ ದಾಸರಿಗೆ ನಮೋ ನಮೋ

ಗುರು ವಿಜಯ ದಾಸರಿಗೆ ಭಾಗಣ್ಣ ದಾಸರಿಗೆ
ಶ್ರೀ ರಂಗ ಒಲಿದ ದಾಸರಿಗೆ ನಮೋ ನಮೋ

ಪರಮ ವೈರಾಗ್ಯಶಾಲಿ ತಿಮ್ಮಣ್ಣ ದಾಸರಿಗೆ
ಹುಂಡೇಕಾರ ದಾಸರಿಗೆ ನಮೋ ನಮೋ

ಗುರು ಶ್ರೀಶ ವಿಠಲನ ಪರಮ ಭಕ್ತರ ಚರಣ
ಸರಸಿಜ ಯುಗಗಳಿಗೆ ನಮೋ ನಮೋ

4. ಸತತ ಗಣನಾಥ ಸಿದ್ಧಿಯ ನೀವ ಕಾರ್ಯದಲಿ

ಸತತ ಗಣನಾಥ ಸಿದ್ಧಿಯ ನೀವ ಕಾರ್ಯದಲಿ
ಮತಿ ಪ್ರೇರಿಸುವಳು ಪಾರ್ವತಿ ದೇವಿ ||ಪ ||

ಮುಕುತಿ ಪಥಕೆ ಮನವೀವ ಮಹರುದ್ರ ದೇವರು
ಭಕುತಿ ದಾಯಕಳು ಶ್ರೀ ಭಾರತಿದೇವಿ ||೧||

ಯುಕುತಿ ಶಾಸ್ತ್ರಗಳಲ್ಲಿ ವನಜಸಂಭವನರಸಿ
ಸತ್ಕರ್ಮಗಳ ನಡೆಸಿ ಸುಜ್ಞಾನ ಮತಿ ಇತ್ತು
ಪಾಲಿಸುವ ನಮ್ಮ ಪವಮಾನನು ||೨||

ಚಿತ್ತದಲ್ಲಿ ಆನಂದ ಸುಖವ ನೀವಳು ರಮಾ
ಭಕ್ತ ಜನರೊಡೆಯ ನಮ್ಮ ಪುರಂದರ ವಿಠಲ
ಸತತ ಇವರಲಿ ನಿಂತು ಈ ಕೃತಿಯ ನಡೆಸುವನು ||೩||

5. ಸತ್ಯ ಜಗಕಿದು ಪಂಚ ಭೇದವು ನಿತ್ಯ ಶ್ರೀಗೋವಿಂದನ

ಸತ್ಯ ಜಗಕಿದು ಪಂಚ ಭೇದವು ನಿತ್ಯ ಶ್ರೀಗೋವಿಂದನ |
ಕೃತ್ಯ ವರಿತು ತಾರತಮ್ಯದಿ ಕೃಷ್ಣನಧಿಕೆಂದು ಸಾರಿರೈ || ಪ ||

ಜೀವ ಈಶಗೆ ಭೇದ ಸರ್ವತ್ರ ಜೀವಜೀವಕೆ ಭೇದವು |
ಜೀವ-ಜಡ ಜಡ-ಜಡಕೆ ಭೇದ ಜೀವ ಜಡ ಪರಮಾತ್ಮಗೆ || ೧ ||

ಮಾನುಷೋತ್ತಮಗಧಿಪ ಕ್ಷಿತಿಪರು ಮನುಜ ದೇವ-ಗಂಧರ್ವರು |
ಜ್ಞಾನಿ-ಪಿತ್ರಾಜಾನ ಕರ್ಮಜ ದಾನವಾರಿ ತತ್ವಾತ್ಮರು || ೨ ||

ಗಣಪಮಿತ್ರರು ಸಪ್ತಋಷಿಗಳು ವಹ್ನಿನಾರದ ವರುಣನು |
ಇನಜಗೆ ಸಮ ಚಂದ್ರಸೂರ್ಯರು ಮನುಸುತೆಯು ಹೆಚ್ಚು ಪ್ರವಹನು || ೩ ||

ದಕ್ಷಸಮ ಅನಿರುದ್ಧ ಗುರು ಶಚಿ ರತಿ ಸ್ವಾಯಂಭುವರಾರ್ವರು |
ದಕ್ಷಪ್ರಾಣಗಿಂದಧಿಕ ಕಾಮನು ಕಿಂಚಿದಧಕನು ಇಂದ್ರನು || ೪ ||

ದೇವ ಇಂದ್ರಗೆ ಅಧಿಕ ಮಹರುದ್ರ ದೇವ ಸಮ ಶೇಷಗರುಡರು |
ಕೇವಲಧಿಕರು ಗರುಡ ಶೇಷಗೆ ದೇವಿ ಭಾರತಿ ಸರಸ್ವತಿ || ೫ ||

ವಾಯುವಿಗೆ ಸಮರಿಲ್ಲ ಜಗದೊಳು ವಾಯು ದೇವರೆ ಬ್ರಹ್ಮರು |
ನಮ್ಮ ವಾಯು ಬ್ರಹ್ಮಗೆ ಕೋಟಿಗುಣದಿಂದಧಿಕ ಶಕ್ತಳು ಶ್ರೀರಮಾ || ೬ ||

ಅನಂತಗುಣದಿಂದ ಲಕುಮಿಗಧಿಕನು ಸಿರಿ ಪುರಂದರ ವಿಠ್ಠಲನು |
ನಮ್ಮ ಘನಸಮರು ಇವಗಿಲ್ಲ ಜಗದೊಳು ಹನುಮಹೃತ್-ಪದ್ಮವಾಸಿಗೆ || ೭ ||

6. ಮೊದಲೊಂದಿಪೆ ನಿನಗೆ ಗಣನಾಥ

ಮೊದಲೊಂದಿಪೆ ನಿನಗೆ ಗಣನಾಥ
ಬಂದ ವಿಘ್ನ ಕಳೆಯೋ ಗಣನಾಥಾ||ಪ||

ಆದಿಯಲ್ಲಿ ಧರ್ಮರಾಯ ಪೂಜಿಸಿ ನಿನ್ನಯ ಪಾದ
ಸಾಧಿಸಿದ ರಾಜ್ಯ ಗಣನಾಥಾ ||1||

ಅಂದು ರಾವಣನು ಮದದಿಂದ ನಿನ್ನ ಪೂಜಿಸದೆ
ಸಂದ ರಣದಲಿ ಗಣನಾಥಾ ||2||

ಮಂಗಳ ಮೂರುತಿ ಗುರು ರಂಗ ವಿಠಲನ ಪಾದ
ಹಿಂಗದೆ ಪಾಲಿಸೋ ಗಣನಾಥಾ ||3||

ಭಾವಪ್ರಕಾಶಿಕಾ ಮೆಟ್ಟಿಲೋತ್ಸವ ೨೦೨೬ ಹಾಡುಗಳು

7. ನಮಃ ಪಾರ್ವತೀ ಪತಿ ನುತಜನಪರ ನಮೊ ವಿರೂಪಾಕ್ಷ

ನಮಃ ಪಾರ್ವತೀ ಪತಿ ನುತಜನಪರ ನಮೊ ವಿರೂಪಾಕ್ಷ
ರಮಾರಮಣನಲಿ ಅಮಲ ಭಕುತಿ ಕೊಡು ನಮೋ ವಿಶಾಲಾಕ್ಷ ||ಪ||

ನೀಲಕಂಠ ತ್ರಿಶೂಲ ಡಮರು ಹಸ್ತಾಲಂಕೃತರಕ್ಷ
ಫಾಲನೇತ್ರ ಕಪಾಲ ರುಂಡಮಣಿ ಮಾಲಾ ಧೃತ ವಕ್ಷ
ಶೀಲರಮ್ಯ ವಿಶಾಲ ಸುಗುಣ ಸಲ್ಲೀಲ ಸುರಾಧ್ಯಕ್ಷ
ಶ್ರೀಲಕುಮೀಶನ ಓಲೈಸುವ ಭಕ್ತಾವಳಿಗಳ ಪಕ್ಷ ||1||

ವಾಸವನುತ ಹರಿದಾಸ ಈಶ ಕೈಲಾಸ ವಾಸ ದೇವ
ದಾಶರಥಿಯ ಔಪಾಸಕ ಸುಜನರ ಪೋಷಿಪ ಪ್ರಭಾವ
ಭಾಸಿಸುತಿಹುದು ಅಶೇಷ ಜೀವರಿಗೆ ಈಶನೆಂಬ ಭಾವ
ಶ್ರೀಶನಲ್ಲಿ ಕೀಲಿಸು ಮನವ ಗಿರಿಜೇಶ ಮಹಾದೇವ ||2||

ಮೃತ್ಯುಂಜಯ ನಿನ್ನುತ್ತಮ ಪದಯುಗ ಭೃತ್ಯನೋ ಸರ್ವತ್ರ
ಹತ್ತಿರ ಕರೆದು ಅಪತ್ಯನಂತೆ ಪೊರೆಯುತ್ತಿರೋ ತ್ರಿನೇತ್ರ
ತೆತ್ತಿಗನಂತೆ ಕಾಯುತ್ತಿಹೆ ಬಾಣನ ಸತ್ಯದಿ ಸುಚರಿತ್ರ
ಕರ್ತೃ ಉಡುಪಿ ಸರ್ವೋತ್ತಮ ಕೃಷ್ಣನ ಪೌತ್ರ ಕೃಪಾ ಪಾತ್ರ ||3||

8. ಪವಮಾನ ಪವಮಾನ ಜಗದ ಪ್ರಾಣ ಸಂಕರುಷಣ ಭವಭಯಾರಣ್ಯ ದಹನ

ಪವಮಾನ ಪವಮಾನ ಜಗದ ಪ್ರಾಣ ಸಂಕರುಷಣ ಭವಭಯಾರಣ್ಯ ದಹನ |ಪ|

ಶ್ರವಣವೆ ಮೊದಲಾದ ನವವಿಧ ಭಕುತಿಯ ತವಕದಿಂದಲಿ ಕೊಡು ಕವಿಜನ ಪ್ರಿಯ |ಅ.ಪ|

ಹೇಮ ಕಚ್ಚುಟ ಉಪವೀತ ಧರಿಪ ಮಾರುತ ಕಾಮಾದಿ ವರ್ಗ ರಹಿತ
ವ್ಯೋಮಾದಿ ಸರ್ವವ್ಯಾಪುತ ಸತತ ನಿರ್ಭೀತ ರಾಮಚಂದ್ರನ ನಿಜದೂತ
ಯಾಮ ಯಾಮಕೆ ನಿನ್ನಾರಾಧಿಪುದಕೆ ಕಾಮಿಪೆ ಎನಗಿದು ನೇಮಿಸಿ ಪ್ರತಿದಿನ
ಈ ಮನಸಿಗೆ ಸುಖಸ್ತೋಮವ ತೋರುತ ಪಾಮರ ಮತಿಯನು ನೀ ಮಾಣಿಪುದು || 1 ||

ವಜ್ರ ಶರೀರ ಗಂಭೀರ ಮುಕುಟಧರ ದುರ್ಜನವನ ಕುಠಾರ
ನಿರ್ಜರ ಮಣಿದಯಾ ಪಾರ ವಾರ ಉದಾರ ಸಜ್ಜನರಘವ ಪರಿಹಾರ
ಅರ್ಜುನಗೊಲಿದಂದು ಧ್ವಜವಾನಿಸಿ ನಿಂದು ಮೂರ್ಜಗವರಿವಂತೆ ಗರ್ಜನೆ ಮಾಡಿದಿ
ಹೆಜ್ಜೆ ಹೆಜ್ಜೆಗೆ ನಿನ್ನ ಅಬ್ಜ ಪಾದದ ಧೂಳಿ ಮಾರ್ಜನದಲಿ ಭವ ವರ್ಜಿತನೆನಿಸೊ || 2 ||

ಪ್ರಾಣ ಅಪಾನ ವ್ಯಾನೋದಾನ ಸಮಾನ ಆನಂದ ಭಾರತಿ ರಮಣ
ನೀನೆ ಶರ್ವಾದಿ ಗೀರ್ವಾಣಾದ್ಯಮರರಿಗೆ ಜ್ಞಾನಧನ ಪಾಲಿಪ ವರೇಣ್ಯ
ನಾನು ನಿರುತದಲಿ ಏನೇನೆಸಗಿದೆ ಮಾನಸಾದಿ ಕರ್ಮ ನಿನಗೊಪ್ಪಿಸಿದೆನೊ
ಪ್ರಾಣನಾಥ ಸಿರಿವಿಜಯವಿಠಲನ ಕಾಣಿಸಿ ಕೊಡುವದು ಭಾನು ಪ್ರಕಾಶ || 3 ||

9. ವೀರ ಹನುಮ ಬಹು ಪರಾಕ್ರಮ

ವೀರ ಹನುಮ ಬಹು ಪರಾಕ್ರಮ ||ಪ||

ಸುಜ್ಞಾನವಿತ್ತು ಪಾಲಿಸೆನ್ನ ಜೀವರೋತ್ತಮ ||ಅ.ಪ||

ರಾಮ ದೂತನೆನಿಸಿ ಕೊಂಡೆ ನೀ, ರಾಕ್ಷಸರ ವನವನೆಲ್ಲ ಕಿತ್ತು ಬಂದೆ ನೀ
ಜಾನಕಿಗೆ ಮುದ್ರೆಯಿತ್ತು ಜಗತಿಗೆಲ್ಲ ಹರ್ಷವಿತ್ತು
ಚೂಡಾಮಣಿಯ ರಾಮಗಿತ್ತು ಲೋಕಕೆ ಮುದ್ದೆನಿಸಿ ಮೆರೆವ || 1 ||

ಗೋಪಿಸುತನ ಪಾದ ಪೂಜಿಸಿ , ಗದೆಯ ಧರಿಸಿ ಬಕಾಸುರನ ಸಂಹರಿಸಿದೆ
ದ್ರೌಪದಿಯ ಮೊರೆಯ ಕೇಳಿ ಮತ್ತೆ ಕೀಚಕನ್ನ ಕೊಂದು
ಭೀಮನೆಂಬ ನಾಮ ಧರಿಸಿ ಸಂಗ್ರಾಮ ಧೀರನಾಗಿ ಜಗದಿ || 2 ||

ಮಧ್ಯಗೇಹನಲ್ಲಿ ಜನಿಸಿ ನೀ ಬಾಲ್ಯದಲ್ಲಿ ಮಸ್ಕರೀಯ ರೂಪಗೊಂಡೆ ನೀ
ಸತ್ಯವತಿಯ ಸುತನ ಭಜಿಸಿ ಸಮ್ಮುಖದಿ ಭಾಷ್ಯ ಮಾಡಿ
ಸಜ್ಜನರ ಪೊರೆವ ಮುದ್ದು ಪುರಂದರವಿಠ್ಠಲನ ದಾಸ || 3 ||

10. ಜಯ ಕೊಲ್ಹಾಪುರ ನಿಲಯೆ ಭಜಧಿಷ್ಟೇತರವಿಲಯೇ

ಜಯ ಕೊಲ್ಹಾಪುರ ನಿಲಯೆ ಭಜಧಿಷ್ಟೇತರವಿಲಯೇ
ತವಪಾದೌ ಹೃದಿಕಲಯೆ ರತ್ನ ರಚಿತ ವಲಯೆ || P ||

ಜಯ ಜಯ ಸಾಗರಜಾತೆ ಕುರು ಕರುಣಾಮಯಿಭೀತೆ
ಜಗದಂಬಾಭಿದಯಾತೇ ಜೀವತಿ ತವಪೋತೆ || 1 ||

ಜಯ ಜಯ ಸಾಗರಸದನೇ | ಜಯ ಕಾಂತ್ಯಾಜಿತ ಮದನೇ
ಜಯ ದುಷ್ಟಾಂತಕ ಕದನೇ ಕುಂದಮುಕುಲರದನೇ || 2 ||

ಸುರರಮಣಿ ನುತಚರಣೇ ಸುಮನಃ ಸಂಕಟಹರಣೇ
ಸುಸ್ವರ ರಂಜಿತವೀಣೆ ಸುಂದರ ನಿಜಕಿರಣೇ || 3 ||

ಭಜದಿಂದೀವರ ಸೋಮೇ ಭವ ಮುಖ್ಯಾಮರಕಾಮೇ
ಭಯ ಮೂಲಾಳಿವಿರಾಮೇ ಭಂಜಿತ ಮುನಿಭೀಮೇ || 4 ||

ಕುಂಕುಮ ರಂಜಿತಫಾಲೇ ಕುಂಜರ ಬಾಂಧವಲೋಲೆ
ಕಲಧೌತೌಮಲಚೈಲೆ ಕೃಂತಕುಜನಜಾಲೆ || 5 ||

ಧೃತ ಕರುಣಾರಸಪೂರೇ ಧನದಾನೊತ್ಸವ ಧೀರೇ
ಧ್ವನಿಲವನಿಂದಿತಕೀರೆ ಧೀರೆದನುಜಧಾರೇ || 6 ||

ಸುರ ಹೃತ್ಪಂಜರಕೀರೇ ಸುಮಗೇಹಾರ್ಪಿತ ಹಾರೇ
ಸುಂದರ ಕುಂಜವಿಹಾರೇ ಸುರ ಪರಿವಾರೇ || 7 ||

ವರ ಕಬರೀ ಧೃತ ಕುಸುಮೆ ವರಕನಕಾಧಿಕಸುಷುಮೆ
ವನ ನಿಲಯಾ ದಯಭೀಮೇ ವದನ ವಿಜಿತ ಸೋಮೇ || 8 ||

ಮದಕಲ ಭಾಲಸಗಮನೇ ಮಧು ಮಥನಾಲಸ ನಯನೇ
ಮೃದುಲೋಲಾಲಕ ರಚನೇ | ಮಧುರ ಸರಸಗಾನೇ || 9 ||

ವ್ಯಾಘ್ರಪುರೀವರನಿಲಯೇ ವ್ಯಾಸಪದಾರ್ಪಿತಹೃದಯೇ
ಕುರುಕರುಣಾಮಹಿಸದಯೇ | ವಿವಿಧನಿಗಮಗೇಯೇ || 10 ||

11. ಹೊಸಗಣ್ಣು ಎನಗೆ ಹಚ್ಚಲಿಬೇಕು ಜಗದಂಬಾ

ಹೋಸಕಣ್ಣು ಎನಗೆ ಹಚ್ಚಲಿಬೇಕು ಜಗದಂಬಾ |
ವಸುದೇವ ಸುತನ ಕಾಂಬುದಕೆ || ಪ ||

ಘಸಣೆಯಾಗಿದೆ ಭವ ವಿಷಯ ವಾರಿಧಿಯೊಳು |
ಶಶಿಮುಖಿ ಕರುಣದಿ ಕಾಯೇ || ಅ.ಪ ||

ಪರರ ಅನ್ನವನುಂಡು ಪರರ ಧನವ ಕಂಡು
ಪರಿ ಪರಿ ಕ್ಲೇಶಗಳುಂಡು
ವರಮಹಾಲಕುಮಿ ನಿನ್ನ ಚರಣಕ್ಕೆ ಮೊರೆಹೊಕ್ಕೆ
ಕರುಣದಿ ಕಣ್ಣೆತ್ತಿ ನೋಡೆ || ೧ ||

ಮಂದಹಾಸಿನಿ ಭವಸಿಂಧುವಿನೊಳಗಿಟ್ಟು
ಚಂದವೇ ಎನ್ನ ನೋಡುವುದು
ಕಂದನಂತೆಂದೆನ್ನ ಕುಂದುಗಳೆಣಿಸದೆ
ಮಂದರೊದ್ಧರನ ತೋರಮ್ಮ || ೨ ||

ಅಂದಚಂದಗಳೊಲ್ಲೆ ಬಂಧುಬಳಗವನೊಲ್ಲೆ |
ಬಂಧನಕ್ಕೆಲ್ಲ ಕಾರಣವು |
ಇಂದಿರೇಶನ ಪಾದದ್ವಂದ್ವವ ತೋರಿ
ಹೃನ್ಮಂದಿರದೊಳು ಬಂದು ನಿಲ್ಲೆ || ೩ ||

12. ವೆಂಕಟರಮಣನೆ ಬಾರೋ ಶೇಷಾಚಲವಾಸನೆ ಬಾರೋ

ವೆಂಕಟರಮಣನೆ ಬಾರೋ ಶೇಷಾಚಲವಾಸನೆ ಬಾರೋ ||ಪ||

ಪಂಕಜನಾಭ ಪರಮ ಪವಿತ್ರ ಶಂಕರ ಮಿತ್ರನೆ ಬಾರೋ ||ಅ.ಪ||

ಮುದ್ದು ಮುಖದ ಮಗುವೆ ನಿನಗೆ ಮುದ್ದು ಕೊಡುವೆನು ಬಾರೋ
ನಿರ್ದಯವೇಕೋ ನಿನ್ನೊಳಗೆ ನಾನು ಪೊಂದಿದ್ದೇನು ಬಾರೋ ||೧||

ಮಂದರ ಗಿರಿಯನೆತ್ತಿದ ಆನಂದ ಮೂರುತಿಯೇ ಬಾರೋ
ನಂದನ ಕಂದ ಗೋವಿಂದ ಮುಕುಂದ ಇಂದಿರೆಯರಸನೆ ಬಾರೋ ||೨||

ಕಾಮನಯ್ಯ ಕರುಣಾಳು ಶ್ಯಾಮಲ ವರ್ಣನೆ ಬಾರೋ
ಕೋಮಲಾಂಗ ಶ್ರೀಪುರಂದರ ವಿಠಲನೆ ಸ್ವಾಮಿರಾಯನೆ ಬಾರೋ ||೩||

13. ವಾರಿಜಲಯಪತೆ ವಾರಿಜನಾಭನೆ ವಾರಿಜಭವಪಿತ ವಾರಿಜನೇತ್ರನೆ

ವಾರಿಜಲಯಪತೆ ವಾರಿಜನಾಭನೆ ವಾರಿಜಭವಪಿತ ವಾರಿಜನೇತ್ರನೆ
ವಾರಿಜಮಿತ್ರ ಅಪಾರ ಪ್ರಭಾವನೆ ವಾರಿಜಜಾಂಡದ ಕಾರಣ ದೊರೆಯೆ
ಬಾರಯ್ಯ ಬಾ ಬಾ ಭಕುತರ ಪ್ರಿಯ ಶ್ರೀನಿವಾಸ ರಾಯ ||ಪ||

ಮಾರ ಜನಕ ಮುಕುತರೊಡೆಯ ದೇವಯ್ಯ ಜೀಯ ||ಅ-ಪ||

ಸ್ಯಂದನವೇರಿ ಬಾಪ್ಪ ರಂಗ ದೇವೋತ್ತುಂಗ
ನಂದ ನಂದನ ಅರಿಮದಭಂಗ ಕರುಣಾಪಾಂಗ
ಸಿಂಧುಶಯನ ಸುಂದರಾಂಗ ಹೇ ನಾರಸಿಂಗ
ಕಂದ ವಿರಿಂಚಿಯು ನಂದಿವಾಹನ ಅಮರೇಂದ್ರ
ಸನಕ ಸನಂದನಾದಿ ಮುನಿವೃಂದ
ನಿಂದು ಬಂದು ಧಿಂ ಧಿಂ ಧಿಮಿಕೆಂದು
ನಿಂದಾಡಲು ಆನಂದದಿ ಮನಕೆ ||೧||

ಜಗತ್ ಜನ್ಮಾದಿ ಕರ್ತ ಗೋವಿಂದ
ಉದರದಿ ಲೋಕ ಲಘುವಾಗಿ ಧರಿಸಿದ ಮುಕುಂದ
ಭಕುತರ ಮನಕೆ ಝಗ ಝಗಿಸುತ ಪೊಳೆವಾನಂದ ನಿಗಮಾವಳಿಯಿಂದ
ಅಗಣಿತ ಮುನಿಗಣ ನಗ ಖಗ ಮೃಗ ಶಶಿ
ಗಗನಮಣ್ಯಾದ್ಯರು ಸೊಗಸಾಗಿ ಬಗೆ ಬಗೆ
ಪೊಗಳುತಲಿ ಬೇಗ ಜಿಗಿಜಿಗಿದಾಡಲು
ಮುಗುಳುನಗೆಯ ಮಹಾ ಉರಗ ಗಿರಿವಾಸ ||೨||

ತಡಮಾಡ ಬ್ಯಾಡವೊ ಹೇ ನಲ್ಲ
ವಾಕು ಲಾಲಿಸು ಎನ್ನೊಡೆಯ ಗೋಪಾಲ ವಿಠ್ಠಲ
ದೇವ ಪರಾಕು ಅಡಿ ಗಳನಿಡು ಭಕ್ತವತ್ಸಲ ಶ್ರೀ ಲಕುಮಿನಲ್ಲ
ಮಡುವಿನೊಳಗೆ ಗಜ ಮೊರೆಯಿಡಲಾಕ್ಷಣ
ಮಡದಿಗೂ ಹೇಳದೆ ದುಡದುಡನೆ ಬಂದು
ಹಿಡಿದು ನಕ್ರನ ಬಾಯ್ ಕಡಿದು ಬಿಡಿಸಿದನೆ
ಸಡಗರದಲಿ ರಮೆಪೊಡವಿಯೊಡಗೂಡಿ ಬೇಗ ||೩||

14. ಬಂದಾನೋ ಗೋವಿಂದ ಚಂದದಿ ಆನಂದ

ಬಂದಾನೋ ಗೋವಿಂದ ಚಂದದಿ ಆನಂದ
ಸುಂದರಿಯ ಮಂದಿರಕ್ಕೆ ನಂದನ ಕಂದ || ಪಲ್ಲವಿ ||

ಕಾನನಾದಲ್ಲಿ ಬಲು ದೀನನಾದಲ್ಲಿ
ವೇಣುನಾದವೂ ತಾ ಕೂಡಿ ಮೋದದಿ
ಜಾಣನಿವನೂ ಸುಮ ಬಾಣ ಪಿತನು
ಮಾನಿನಿಯ ಮಂದಿರದಿ ಗಾನ ಮಾಡುತಾ ||1||

ಓಡಿ ಬಂದರೋ ಬಲು ಬೇಡಿಕೊಂಡರೋ
ಗಾರುಡಿಕಾರನೂ ಅವರ ಕೂಡಿ ಮೆರೆದನೂ
ಮಾಡಿದ ಜಾಲ ವಾಸುದೇವ ವಿಠಲ
ಮಾಡಿದ ಮನ ಮಾಡಿದ ತಾ ಕೂಡಿದನಾಗ ||2||

15. ಶ್ರೀನಿವಾಸ ನೀನೇ ಪಾಲಿಸೋ ಶ್ರಿತಜನ ಪಾಲ

ಶ್ರೀನಿವಾಸ ನೀನೇ ಪಾಲಿಸೋ ಶ್ರಿತಜನ ಪಾಲ
ಗಾನಲೋಲ ಶ್ರೀ ಮುಕುಂದನೇ || ಪ ||

ಧ್ಯಾನಮಾಳ್ಪ ಸಜ್ಜನರ ಮಾನದಿಂ ಪರಿಪಾಲಿಪ
ವೇಣುಗೋಪಾಲಾ ಮುಕುಂದ ವೇದವೇದ್ಯ ನಿತ್ಯಾನಂದ ||ಅಪ||

ಎಂದಿಗೆ ನಿನ್ನ ಪಾದಾಬ್ಜವ ಪೊಂದುವ ಸುಖ
ಎಂದಿಗೆ ಲಭ್ಯವೋ ಮಾಧವ
ಅಂಧಕಾರಣ್ಯದಲ್ಲಿ ನಿಂದು ತತ್ತರಿಸುತಿಹೆನೊ
ಬಂದು ಬಂದು ಈ ಭವದಿ ಬೆಂದು ನೊಂದೇನೊ ಮುಕುಂದ||1||

ಎಷ್ಟು ದಿನ ಕಷ್ಟ ಪಡುವುದೊ
ಯಶೋದೆ ಕಂದ ದೃಷ್ಟಿಯಿಂದ ನೋಡಲಾಗದೆ
ಮುಟ್ಟಿ ನಿನ್ನ ಭಜಿಸಲಾರೆ ಕೆಟ್ಟ ನರಜನ್ಮದೊಳು
ದುಷ್ಟ ಕಾರ್ಯ ಮಾಡಿದಾಗ್ಯು ಇಷ್ಟನಾಗಿ ಕೈಯಪಿಡಿದು ||2||

ಅನುದಿನ ಅನೇಕ ರೋಗಂಗಳ ಅನುಭವಿಸಿದೆನೋ
ಘನ್ನ ಮಹಿಮ ನೀನೇ ಕೇಳಯ್ಯ
ತನುವಿನಲಿ ಬಲವಿಲ್ಲ ನೆನೆದ ಮಾತ್ರದಿ ಸಲಹುವ
ಹನುಮದೀಶ ಪುರಂದರವಿಟ್ಠಲನೆ ಕೈಯ ಪಿಡಿದು ||3||

16. ನಾರಾಯಣ ಗೋವಿಂದ - ನರಹರಿ

ನಾರಾಯಣ ಗೋವಿಂದ - ನರಹರಿ
ನಾರಾಯಣ ಗೋವಿಂದ ||ಪ||

ನಾರಾಯಣ ಗೋವಿಂದ ಮುಕುಂದ
ಪರತರ ಪರಮಾನಂದ ||ಅ.ಪ||

ಮೊದಲು ಮತ್ಸ್ಯನಾಗಿ ಉದಿಸಿ ಸೋಮನನು
ಸದೆದು ವೇದಗಳ ತಂದ ||1||

ಮಂದರಗಿರಿಯಲಿ ಸಿಂಧುಮಥಿಸಿ ಸುಧೆ
ತಂದು ಭಕ್ತರಿಗುಣಲೆಂದ ||2||

ಭೂಮಿಯ ಕದಿದಾ ಖಳನನು ಮರ್ದಿಸಿ
ಆ ಮಹಾಸತಿಯಳ ತಂದ ||3||

ದುರುಳ ಹಿರಣ್ಯನ ಕರುಳುಬಗೆದು ತನ್ನ
ಕೊರಳೊಳಗಿಟ್ಟಾನಂದದಿಂದ ||4||

ಪುಟ್ಟನಾಗಿ ದಾನಕೊಟ್ಟ ಬಲಿಯ ತಲೆ
ಮೆಟ್ಟಿ ತುಳಿದ ಬಗೆಯಿಂದ ||5||

ಧಾತ್ರಿಯೊಳಗೆ ಮುನಿಪುತ್ರನಾಗಿ ಬಂದು
ಕ್ಷತ್ರಿಯರೆಲ್ಲರ ಕೊಂದ ||6||

ಮಡದಿಗಾಗಿ ತಾ ಕಡಲನೆ ಕಟ್ಟಿ
ಹಿಡಿದು ರಾವಣನ ಕೊಂದ ||7||

ಗೋಕುಲದೊಳು ಹುಟ್ಟಿ ಆಕಳ ಕಾಯ್ದು
ಶ್ರೀಕೃಷ್ಣನು ತಾ ಬಂದ ||8||

ಫಲದಲಿ ತ್ರಿಪುರರ ಸತಿಯರ ವ್ರತದ
ಫಲವನಳಿದ ಬಗೆಯಿಂದ ||9||

ಧರೆಯೊಳು ಪರಮ ನೀಚರ ಸವರಲು ಕು -
ದುರೆಯನೇರಿದ ಕಲಿ ಚೆಂದ ||10||

ದೋಷದೂರ ಶ್ರೀ ಪುರಂದರ ವಿಠಲ
ಪೋಷಿಪ ಭಕ್ತರ ವೃಂದ ||11||

17. ಬಿಡೆನೋ ನಿನ್ನಂಘ್ರಿ ಶ್ರೀನಿವಾಸ ಎನ್ನ ದುಡಿಸಿಕೊಳ್ಳಲೋ ಶ್ರೀನಿವಾಸ

ಬಿಡೆನೋ ನಿನ್ನಂಘ್ರಿ ಶ್ರೀನಿವಾಸ ಎನ್ನ ದುಡಿಸಿಕೊಳ್ಳಲೋ ಶ್ರೀನಿವಾಸ
ನಿನ್ನ ನುಡಿಯೇಜಿತಲ್ಲೋ ಶ್ರೀನಿವಾಸ ನನ್ನ ನಡೆ ತಪ್ಪು ಕಾಯೋ ಶ್ರೀನಿವಾಸ ||1||

ಬಡಿಯೋ ಬೆನ್ನಲ್ಲಿ ಶ್ರೀನಿವಾಸ ಎನ್ನ ಒಡಲ ಹೊಯ್ಯದಿರೂ ಶ್ರೀನಿವಾಸ
ನಾ ಬಡವ ಕಾಣೆಲೂ ಶ್ರೀನಿವಾಸ ನಿನ್ನ ಒಡಲ ಹೂಕ್ಕೆನೂ ಶ್ರೀನಿವಾಸ||2 ||

ಪಂಜು ಪಿಡಿವೇನೂ ಶ್ರೀನಿವಾಸ ನಿನ್ನ ಎಂಜಲ ಬಳಿದುಂಬೆ ಶ್ರೀನಿವಾಸ
ನಾ ಸಂಜೆ ಉದಯಕೆ ಶ್ರೀನಿವಾಸ ಕಾಳಂಜಿಯ ಪಿಡಿವೆ ಶ್ರೀನಿವಾಸ ||3||

ಸತ್ತಿಗೆ ಚಾಮರ ಶ್ರೀನಿವಾಸ ನಾ ನೆತ್ತಿ ಕುಣಿವೇನೂ ಶ್ರೀನಿವಾಸ
ನಿನ್ನ ರತ್ನದ ಹಾವಿಗೆ ಶ್ರೀನಿವಾಸ ನಾ ಹೊತ್ತು ನಲಿವೇನೂ ಶ್ರೀನಿವಾಸ ||4||

ಹೇಳಿದಂತಾಲಿಹೆ ಶ್ರೀನಿವಾಸ ನಿನ್ನಾಳಿಗಾಳಾಗಿಹೆ ಶ್ರೀನಿವಾಸ
ಅವರೂಳಿಗವ ಮಾಳ್ಪೆ ಶ್ರೀನಿವಾಸ ಎನ್ನಪಾಲಿಸೊ ಬಿಡದೇ ಶ್ರೀನಿವಾಸ ||5||

ನಿನ್ನ ನಾಮ ಹೋಳಿಗೆ ಶ್ರೀನಿವಾಸ ಕಳ್ಳ ಕುನ್ನಿ ನಾನಾಗಿಹೆ ಶ್ರೀನಿವಾಸ
ಕಟ್ಟಿ ನಿನ್ನವರೋದ್ದರೆ ಶ್ರೀನಿವಾಸ ನನಗಿನ್ನೂ ಲಜ್ಜೆತಕೆ ಶ್ರೀನಿವಾಸ ||6||

ಬೀಸಿ ಕೊಲ್ಲಲವರೆ ಶ್ರೀನಿವಾಸ ಮುದ್ರೆ ಕಾಸಿ ಚುಚ್ಚುಲವರೆ ಶ್ರೀನಿವಾಸ
ಮಿಕ್ಕ ಘಾಸಿಗಂಜೆನಯ್ಯ ಶ್ರೀನಿವಾಸ ಏಂಜಲಾಸೇ ಬಂಟ ನಾ ಶ್ರೀನಿವಾಸ ||7||

ಹೇಸಿ ನಾನಾದರೆ ಶ್ರೀನಿವಾಸ ಹರಿದಾಸರೂಳು ಪೊಕ್ಕೆ ಶ್ರೀನಿವಾಸ
ಅವರ ಭಾಷೆಯ ಕೇಳಿಹೆ ಶ್ರೀನಿವಾಸ ಆ ವಾಸಿಯ ಸೈರಿಸೂ ಶ್ರೀನಿವಾಸ ||8||

ತಿಂಗಳವನಲ್ಲ ಶ್ರೀನಿವಾಸ ವತ್ಸರಂಗಳವನಲ್ಲ ಶ್ರೀನಿವಾಸ
ರಾಜಂಗಳ ಸವಡಿಪೆ ಶ್ರೀನಿವಾಸ ಭವಂಗಳ ದಾಟುವೆ ಶ್ರೀನಿವಾಸ ||9||

ನಿನ್ನವ ನಿನ್ನವ ಶ್ರೀನಿವಾಸ ನಾನನ್ಯವನರಿಯೇನೋ ಶ್ರೀನಿವಾಸ
ಅಯ್ಯ ಮನ್ನಿಸೂ ತಾಯಿತಂದೆ ಶ್ರೀನಿವಾಸ ಪ್ರಸನ್ನ ವೆಂಕಟಾದ್ರಿ ಶ್ರೀನಿವಾಸ ||10||

18. ಶ್ರೀನಿವಾಸಾ ಗೋವಿಂದಾ ಶ್ರೀ ವೇಂಕಟೇಶಾ ಗೋವಿಂದಾ

ಶ್ರೀನಿವಾಸಾ ಗೋವಿಂದಾ ಶ್ರೀ ವೇಂಕಟೇಶಾ ಗೋವಿಂದಾ
ಭಕ್ತವತ್ಸಲಾ ಗೋವಿಂದಾ ಭಾಗವತಪ್ರಿಯ ಗೋವಿಂದಾ
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] ॥ 1 ॥

ನಿತ್ಯನಿರ್ಮಲಾ ಗೋವಿಂದಾ ನೀಲಮೇಘಶ್ಯಾಮ ಗೋವಿಂದಾ
ಪುರಾಣಪುರುಷಾ ಗೋವಿಂದಾ ಪುಂಡರೀಕಾಕ್ಷ ಗೋವಿಂದಾ
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] ॥ 2 ॥

ನಂದನಂದನಾ ಗೋವಿಂದಾ ನವನೀತಚೋರಾ ಗೋವಿಂದಾ
ಪಶುಪಾಲಕ ಶ್ರೀ ಗೋವಿಂದಾ ಪಾಪವಿಮೋಚನ ಗೋವಿಂದಾ
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] ॥ 3 ॥

ದುಷ್ಟಸಂಹಾರ ಗೋವಿಂದಾ ದುರಿತನಿವಾರಣ ಗೋವಿಂದಾ
ಶಿಷ್ಟಪರಿಪಾಲಕ ಗೋವಿಂದಾ ಕಷ್ಟನಿವಾರಣ ಗೋವಿಂದಾ
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] ॥ 4 ॥

ವಜ್ರಮಕುಟಧರ ಗೋವಿಂದಾ ವರಾಹಮೂರ್ತಿವಿ ಗೋವಿಂದಾ
ಗೋಪೀಜನಪ್ರಿಯ ಗೋವಿಂದಾ ಗೋವರ್ಧನೋದ್ಧಾರ ಗೋವಿಂದಾ [ಗೋಪೀಜನಲೋಲ]
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] ॥ 5 ॥

ದಶರಥನಂದನ ಗೋವಿಂದಾ ದಶಮುಖಮರ್ದನ ಗೋವಿಂದಾ
ಪಕ್ಷಿವಾಹನಾ ಗೋವಿಂದಾ ಪಾಂಡವಪ್ರಿಯ ಗೋವಿಂದಾ
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] ॥ 6 ॥

ಮತ್ಸ್ಯಕೂರ್ಮ ಗೋವಿಂದಾ ಮಧುಸೂಧನ ಹರಿ ಗೋವಿಂದಾ
ವರಾಹ ನರಸಿಂಹ ಗೋವಿಂದಾ ವಾಮನ ಭೃಗುರಾಮ ಗೋವಿಂದಾ
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] ॥ 7 ॥

ಬಲರಾಮಾನುಜ ಗೋವಿಂದಾ ಬೌದ್ಧ ಕಲ್ಕಿಧರ ಗೋವಿಂದಾ
ವೇಣುಗಾನಪ್ರಿಯ ಗೋವಿಂದಾ ವೇಂಕಟರಮಣಾ ಗೋವಿಂದಾ
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] ॥ 8 ॥

ಸೀತಾನಾಯಕ ಗೋವಿಂದಾ ಶ್ರಿತಪರಿಪಾಲಕ ಗೋವಿಂದಾ
ಶ್ರಿತಜನಪೋಷಕ ಗೋವಿಂದಾ ಧರ್ಮಸಂಸ್ಥಾಪಕ ಗೋವಿಂದಾ [ದರಿದ್ರಜನ ಪೋಷಕ]
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] ॥ 9 ॥

ಅನಾಥರಕ್ಷಕ ಗೋವಿಂದಾ ಆಪದ್ಬಾಂದವ ಗೋವಿಂದಾ
ಭಕ್ತವತ್ಸಲಾ ಗೋವಿಂದಾ ಕರುಣಾಸಾಗರ ಗೋವಿಂದಾ [ಶರಣಾಗತವತ್ಸಲ]
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] |10|

ಕಮಲದಳಾಕ್ಷ ಗೋವಿಂದಾ ಕಾಮಿತಫಲದಾತ ಗೋವಿಂದಾ
ಪಾಪವಿನಾಶಕ ಗೋವಿಂದಾ ಪಾಹಿ ಮುರಾರೇ ಗೋವಿಂದಾ
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] |11|

ಶ್ರೀ ಮುದ್ರಾಂಕಿತ ಗೋವಿಂದಾ ಶ್ರೀ ವತ್ಸಾಂಕಿತ ಗೋವಿಂದಾ
ಧರಣೀನಾಯಕ ಗೋವಿಂದಾ ದಿನಕರತೇಜಾ ಗೋವಿಂದಾ
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] |12|

ಪದ್ಮಾವತೀಪ್ರಿಯ ಗೋವಿಂದಾ ಪ್ರಸನ್ನಮೂರ್ತೀ ಗೋವಿಂದಾ
ಅಭಯಹಸ್ತ ಗೋವಿಂದಾ ಮತ್ಸ್ಯಾವತಾರ ಗೋವಿಂದಾ
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] |13|

ಶಂಖಚಕ್ರಧರ ಗೋವಿಂದಾ ಶಾರ್ಙ್ಗಗದಾಧರ ಗೋವಿಂದಾ
ವಿರಾಜಾತೀರ್ಥಸ್ಥ ಗೋವಿಂದಾ ವಿರೋಧಿಮರ್ಧನ ಗೋವಿಂದಾ
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] |14|

ಸಾಲಿಗ್ರಾಮಧರ ಗೋವಿಂದಾ ಸಹಸ್ರನಾಮಾ ಗೋವಿಂದಾ
ಲಕ್ಷ್ಮೀವಲ್ಲಭ ಗೋವಿಂದಾ ಲಕ್ಷ್ಮಣಾಗ್ರಜ ಗೋವಿಂದಾ
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] |15|

ಕಸ್ತೂರಿತಿಲಕ ಗೋವಿಂದಾ ಕನಕಾಂಬರಧರ ಗೋವಿಂದಾ
ಗರುಡವಾಹನಾ ಗೋವಿಂದಾ ಗಜರಾಜ ರಕ್ಷಕ ಗೋವಿಂದಾ
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] |16|

ವಾನರಸೇವಿತ ಗೋವಿಂದಾ ವಾರಧಿಬಂಧನ ಗೋವಿಂದಾ
ಏಕಸ್ವರೂಪ ಗೋವಿಂದಾ ರಾಮಕೃಷ್ಣಾ ಗೋವಿಂದಾ
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] |17|

ಭಕ್ತನಂದನ ಗೋವಿಂದಾ ಪ್ರತ್ಯಕ್ಷದೇವಾ ಗೋವಿಂದಾ
ಪರಮದಯಾಕರ ಗೋವಿಂದಾ ವಜ್ರಕವಚಧರ ಗೋವಿಂದಾ
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] |18|

ವೈಜಯಂತಿಮಾಲ ಗೋವಿಂದಾ ವಡ್ಡಿಕಾಸುಲ ಗೋವಿಂದಾ
ವಸುದೇವಸುತ ಗೋವಿಂದಾ ಶ್ರೀವಾಸುದೇವ ಗೋವಿಂದಾ
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] |19|

ನಿತ್ಯಕಲ್ಯಾಣ ಗೋವಿಂದಾ ನೀರಜನಾಭ ಗೋವಿಂದಾ
ನೀಲಾದ್ರಿವಾಸ ಗೋವಿಂದಾ ನೀಲಮೇಘಶ್ಯಾಮ ಗೋವಿಂದಾ [ಕ್ಷೀರಾಬ್ಧಿವಾಸ]
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] |20|

ಸ್ವಯಂ ಪ್ರಕಾಶ ಗೋವಿಂದಾ ಆನಂದನಿಲಯ ಗೋವಿಂದಾ
ಶ್ರೀದೇವಿನಾಥ ಗೋವಿಂದಾ ದೇವಕಿ ನಂದನ ಗೋವಿಂದಾ
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] |21|

ತಿರುಮಲವಾಸ ಗೋವಿಂದಾ ರತ್ನಕಿರೀಟ ಗೋವಿಂದಾ
ಆಶ್ರಿತಪಕ್ಷ ಗೋವಿಂದಾ ನಿತ್ಯಶುಭಪ್ರದ ಗೋವಿಂದಾ
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] |22|

ಆನಂದರೂಪ ಗೋವಿಂದಾ ಆದ್ಯಂತರಹಿತ ಗೋವಿಂದಾ
ಇಹಪರ ದಾಯಕ ಗೋವಿಂದಾ ಇಭರಾಜ ರಕ್ಷಕ ಗೋವಿಂದಾ
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] |23|

ಪದ್ಮದಲಾಕ್ಷ ಗೋವಿಂದಾ ತಿರುಮಲನಿಲ್ಯ ಗೋವಿಂದಾ
ಶೇಷಶಾಯಿನೀ ಗೋವಿಂದಾ ಶೇಷಾದ್ರಿನಿಲಯ ಗೋವಿಂದಾ
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] |24|

ವರಾಹ ಖೂಪ ಗೋವಿಂದಾ ಶ್ರೀ ಕೂರ್ಮರೂಪ ಗೋವಿಂದಾ
ವಾಮನಖೂಪ ಗೋವಿಂದಾ ನರಹರಿರೂಪ ಗೋವಿಂದಾ
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] |25|

ಶ್ರೀ ಪರಶುರಾಮ ಗೋವಿಂದಾ ಶ್ರೀ ಬಲರಾಮ ಗೋವಿಂದಾ
ರಘುಕುಲ ರಾಮ ಗೋವಿಂದಾ ಶ್ರೀ ರಾಮಕೃಷ್ಣ ಗೋವಿಂದಾ
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] |26|

ತಿರುಮಲನಾಯಕ ಗೋವಿಂದಾ ಶ್ರಿತಜನಪೋಷಕ ಗೋವಿಂದಾ
ಶ್ರೀದೇವಿನಾಥ ಗೋವಿಂದಾ ಶ್ರೀವತ್ಸಾಂಕಿತ ಗೋವಿಂದಾ
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] |27|

ಗೋವಿಂದಾನಾಮ ಗೋವಿಂದಾ ವೇಂಕಟರಮಣಾ ಗೋವಿಂದಾ
ಕ್ಷೇತ್ರಪಾಲಕ ಗೋವಿಂದಾ ತಿರುಮಲನಾಥ ಗೋವಿಂದಾ |
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] |28|

ವಾನರಸೇವಿತ ಗೋವಿಂದಾ ವಾರಧಿಬಂಧನ ಗೋವಿಂದಾ
ಏಡುಕೊಂಡಲವಾಡ ಗೋವಿಂದಾ ಏಕತ್ವರೂಪಾ ಗೋವಿಂದಾ
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] |29|

ಶ್ರೀ ರಾಮಕೃಷ್ಣ ಗೋವಿಂದಾ ರಘುಕುಲ ನಂದನ ಗೋವಿಂದಾ
ಪ್ರತ್ಯಕ್ಷದೇವಾ ಗೋವಿಂದಾ ಪರಮದಯಾಕರ ಗೋವಿಂದಾ
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] |30|

ವಜ್ರಕವಚಧರ ಗೋವಿಂದಾ ವೈಜಯಂತಿಮಾಲ ಗೋವಿಂದಾ
ವಡ್ಡಿಕಾಸುಲವಾಡ ಗೋವಿಂದಾ ವಸುದೇವತನಯಾ ಗೋವಿಂದಾ
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] |31|

ಬಿಲ್ವಪತ್ರಾರ್ಚಿತ ಗೋವಿಂದಾ ಭಿಕ್ಷುಕ ಸಂಸ್ತುತ ಗೋವಿಂದಾ
ಸ್ತ್ರೀಪುಂಸರೂಪಾ ಗೋವಿಂದಾ ಶಿವಕೇಶವಮೂರ್ತಿ ಗೋವಿಂದಾ
ಬ್ರಹ್ಮಾಂಡರೂಪಾ ಗೋವಿಂದಾ ಭಕ್ತರಕ್ಷಕ ಗೋವಿಂದಾ
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] |32|

ನಿತ್ಯಕಳ್ಯಾಣ ಗೋವಿಂದಾ ನೀರಜನಾಭ ಗೋವಿಂದಾ
ಹಾತೀರಾಮಪ್ರಿಯ ಗೋವಿಂದಾ ಹರಿ ಸರ್ವೋತ್ತಮ ಗೋವಿಂದಾ
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] |33|

ಜನಾರ್ಧನಮೂರ್ತಿ ಗೋವಿಂದಾ ಜಗತ್ಸಾಕ್ಷಿರೂಪಾ ಗೋವಿಂದಾ
ಅಭಿಷೇಕಪ್ರಿಯ ಗೋವಿಂದಾ ಆಪನ್ನಿವಾರಣ ಗೋವಿಂದಾ
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] |34|

ರತ್ನಕಿರೀಟಾ ಗೋವಿಂದಾ ರಾಮಾನುಜನುತ ಗೋವಿಂದಾ
ಸ್ವಯಂಪ್ರಕಾಶಾ ಗೋವಿಂದಾ ಆಶ್ರಿತಪಕ್ಷ ಗೋವಿಂದಾ
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] |35|

ನಿತ್ಯಶುಭಪ್ರದ ಗೋವಿಂದಾ ನಿಖಿಲಲೋಕೇಶಾ ಗೋವಿಂದಾ
ಆನಂದರೂಪಾ ಗೋವಿಂದಾ ಆದ್ಯಂತರಹಿತಾ ಗೋವಿಂದಾ
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] |36|

ಇಹಪರ ದಾಯಕ ಗೋವಿಂದಾ ಇಭರಾಜ ರಕ್ಷಕ ಗೋವಿಂದಾ
ಪರಮದಯಾಳೋ ಗೋವಿಂದಾ ಪದ್ಮನಾಭಹರಿ ಗೋವಿಂದಾ
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] |37|

ತಿರುಮಲವಾಸಾ ಗೋವಿಂದಾ ತುಲಸೀವನಮಾಲ ಗೋವಿಂದಾ
ಶೇಷಾದ್ರಿನಿಲಯಾ ಗೋವಿಂದಾ ಶೇಷಸಾಯಿನೀ ಗೋವಿಂದಾ
ಶ್ರೀ ಶ್ರೀನಿವಾಸಾ ಗೋವಿಂದಾ ಶ್ರೀ ವೇಂಕಟೇಶಾ ಗೋವಿಂದಾ
ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ [ವೇಂಕಟರಮಣ ಗೋವಿಂದಾ] |38|

19. ಜೈ ಜೈ ರಾಮ ಹರೇ ಜೈ ಜೈ ಕೃಷ್ಣ ಹರೇ

ಜೈ ಜೈ ರಾಮ ಹರೇ ಜೈ ಜೈ ಕೃಷ್ಣ ಹರೇ
ಕೌಸಲ್ಯಜ ವರ ವಂಶೋದ್ಭವ ಸುರ ಸಂಸೇವಿತ ಪದ ರಾಮ ಹರೇ
ಕಂಸಾದ್ಯಸುರರ ಧ್ವಂಸಗೈದ ಯದುವಂಶೋದ್ಭವ ಕೃಷ್ಣ ಹರೇ

ಮುನಿಮಖರಕ್ಷಕ ಧನುಜರ ಶಿಕ್ಷಕ ಫಣಿಧರ ಸನ್ನುತ ರಾಮ ಹರೇ
ಘನವರ್ಣಾಂಗ ಸುಮನಸರೊಡೆಯ ವನಜಾಸನ ಪಿತ ಕೃಷ್ಣ ಹರೇ

ಶಿಲೆಯ ಪಾದರಜದಲಿ ಸ್ತ್ರೀ ಮಾಡಿದ ಸುಲಲಿತ ಗುಣನಿಧಿ ರಾಮ ಹರೇ
ಬಲು ವಕ್ರಾಗಿದ್ದ ಅಬಲೆಯ ಕ್ಷಣದಲಿ ಚೆಲುವೆಯ ಮಾಡಿದ ಕೃಷ್ಣ ಹರೇ

ಹರ ಧನು ಭಂಗಿಸಿ ಹರುಷದಿ ಜಾನಕಿ ಕರವ ಪಿಡಿದ ರಾಮ ಹರೇ
ಸಿರಿ ರುಕ್ಮಿಣಿಯನು ತ್ವರದಲಿ ವರಿಸಿದ ಶರಣರ ಪಾಲಕ ಕೃಷ್ಣ ಹರೇ

ಜನಕ ಪೇಳೆ ಲಕ್ಷ್ಮಣ ಸೀತಾ ಸಹ ವನಕೆ ತೆರಳಿದ ರಾಮ ಹರೇ
ವನಕೆ ಪೋಗಿ ತನ್ನಣುಗರೊಡನೆ ಗೋವನು ಪಾಲಿಪ ಶ್ರೀ ಕೃಷ್ಣ ಹರೇ

ತಾಟಕಿ ಖರಮಧುಕೈಟಭಾದಿ ಪಾಪಾಟವಿ ಸುರಮುಖ ರಾಮ ಹರೇ
ಆಟದಿ ಫಣಿ ಮ್ಯಾಲ್ ನಾಟ್ಯವನಾಡಿದ ಖೇಟವಾಹನ ಕೃಷ್ಣ ಹರೇ

ಚದುರೆ ಶಬರಿಯಿತ್ತ ಬದರಿಯ ಫಲವನು ಮುದದಿ ಸೇವಿಸಿದ ರಾಮ ಹರೇ
ವಿದುರನ ಕ್ಷೀರಕೆ ಒದಗಿಹೋದ ಪದುಮನಾಭ ಜಯ ಕೃಷ್ಣ ಹರೇ

ಸೇವಿತ ಹನುಮ ಸುಗ್ರೀವನ ಸಖ ಜಗತ್ಪಾವನ ಪರತರ ರಾಮ ಹರೇ
ದೇವಕಿ ವಸುದೇವರ ಸೆರೆ ಬಿಡಿಸಿದ ದೇವ ದೇವ ಕೃಷ್ಣ ಹರೇ

ಗಿರಿಗಳಿಂದ ವರ ಶರಧಿ ಬಂಧಿಸಿದ ಪರಮ ಸಮರ್ಥ ರಾಮ ಹರೇ
ಗಿರಿಯ ತನ್ನ ಕಿರಿ ಬೆರಳಲೆತ್ತಿ ಗೋವರನ ಕಾಯ್ದ ಕೃಷ್ಣ ಹರೇ

ಖಂಡಿಸಿ ದಶಶಿರ ಚೆಂಡಾಡಿದ ಕೋದಂಡಪಾಣಿ ರಾಮ ಹರೇ
ಪಾಂಡು ತನಯರಿಂದ ಚಂಡ ಕೌರವರ ದಿಂಡು ಕೆಡವಿಸಿದ ಕೃಷ್ಣ ಹರೇ

ತವಕದಿ ಅಯೋಧ್ಯಾಪುರಕೈದಿದ ತನ್ನ ಯುವತಿಯೊಡನೆ ರಾಮಹರೇ
ರವಿಸುತತನಯಗೆ ಪಟ್ಟವ ಕಟ್ಟಿದ ಭವತಾರಕ ಶ್ರೀ ಕೃಷ್ಣ ಹರೇ

ಭರತನು ಪ್ರಾರ್ಥಿಸಲರಸತ್ವವ ಸ್ವೀಕರಿಸಿದ ತ್ವರದಲಿ ರಾಮ ಹರೇ
ವರಧರ್ಮಾದ್ಯರ ಧರೆಯೊಳು ಮೆರೆಸಿದ ಪರಮ ಕೃಪಾಕರ ಕೃಷ್ಣ ಹರೇ

ಧರೆಯೊಳಗಜ್ಞಜನರನು ಮೋಹಿಪುದಕೆ ಹರನ ಪೂಜಿಸಿದ ರಾಮ ಹರೇ
ಹರನ ಪ್ರಾರ್ಥಿಸಿ ವರವನು ಪಡೆದ ಚರಿತೆ ಅಗಾಧವು ಕೃಷ್ಣ ಹರೇ

ಅತುಳ ಮಹಿಮ ಸದ್ ಯತಿಗಳ ಹೃದಯದಿ ಸತತ ವಿರಾಜಿಪ ರಾಮ ಹರೇ
ಸಿತವಾಹನ ಸಾರಥಿಯೆನಿಸಿದ ಸುರತತಿ ಪೂಜಿತ ಪದ ಕೃಷ್ಣ ಹರೇ

ರಾಮರಾಮ ಎಂದು ನೇಮದಿ ಭಜಿಪರ ಕಾಮಿತಫಲದ ರಾಮ ಹರೇ
ಪ್ರೇಮದಿ ಭಕ್ತರ ಪಾಲಿಪ ಶ್ರೀ ವರದೇಶ ವಿಠಲ ಕೃಷ್ಣ ಹರೇ

20. ನಂದೇನದೋ ಸ್ವಾಮಿ ನಿಂದೇ ಇದೆಲ್ಲವೂ

ನಂದೇನದೋ ಸ್ವಾಮಿ ನಿಂದೇ ಇದೆಲ್ಲವೂ
ನಂದನಂದನ ಮುಕುಂದ ಗೋವಿಂದ ||ಪ||

ಹಿಂದೇಸು ಜನುಮವೂ ಹೇಗಾದರಾಗಲಿ
ಮುಂದೆನ್ನ ಕಾಯೋ ಹರೇ ಶ್ರೀಕೃಷ್ಣ || ಅ. ಪ||

ಜನನ ಮರಣ ನಿಂದೇ, ಜನ್ಮಸಾಧನ ನಿಂದೇ
ಅನುಕೂಲಾದರವು ನಿನ್ನದಯ್ಯಾ
ತನುಮನವೂ ನಿಂದೇ, ಕಾಯ ದೊರೆವುದೂ ನಿಂದೇ
ಚಿನುಮಯರೂಪನೇ ಅನುಮಾನವ್ಯಾತಕೆ ||1||

ಕಾಯಕಷ್ಟವು ನಿಂದೇ, ದೇಹದ ಬಲ ನಿಂದೇ
ನ್ಯಾಯ ಅನ್ಯಾಯವೂ ನಿನ್ನದಯ್ಯಾ
ಬಾಯಿಮಾತು ನಿಂದೇ, ಬರುವ ಭಾಗ್ಯ ನಿಂದೇ
ಕಾಯಜ ಪಿತ ನಿನ್ನ ಮಾಯಾ ತಿಳಿಯದಯ್ಯಾ ||2||

ಯಾತ್ರೆ ತೀರ್ಥವು ನಿಂದೇ, ಕ್ಷೇತ್ರದ ಫಲ ನಿಂದೇ
ಸತ್ಪಾತ್ರ ದಾನ ನೇಮ ನಿಂದೇ
ಧಾತ್ರಿಯೊಳ್ ಪರಿಪೂರ್ಣ ಕ್ಷೇತ್ರ ವೆಂಕಟ ವಿಠಲ
ಸ್ತೋತ್ರ ಮಾಲ್ಪುದು ವಿಚಿತ್ರ ನಿನ್ನದಯ್ಯಾ ||3||

21. ಸಿಂಹರೂಪನಾದ ಶ್ರೀ ಹರಿ ಹೇ ನಾಮಗಿರೀಶನೇ

ಸಿಂಹರೂಪನಾದ ಶ್ರೀ ಹರಿ ಹೇ ನಾಮಗಿರೀಶನೇ ||ಪ||

ಒಮ್ಮನದಿಂದ ನಿಮ್ಮನು ಭಜಿಸಲು
ಸಮ್ಮತದಿಂದಲಿ ಕಾಯ್ವೆನೆಂದ ಹರಿ ||ಅ.ಪ||

ತರಳನು ಕರೆಯೆ ಸ್ಥಂಭವು ಬಿರಿಯೇ
ತುಂಬಾ ಉಗ್ರವನು ತೋರಿದನು
ಕರುಳನು ಬಗೆದು ತನ್ ಕೊರಳೊಳಗಿಟ್ಟು
ತರಳನ ಸಲಹಿದ ಶ್ರೀ ನರಸಿಂಹನೆ ||೧||

ಭಕ್ತರೆಲ್ಲ ಕೂಡಿ ಬಹು ದೂರ ಓಡಿ
ಪರಮ ಶಾಂತವನು ಬೇಡಿದರು
ಕರೆತಂದು ಸಿರಿಯ ತೊಡೆಯೊಳು ಕುಳಿಸಲು
ಪರಮ ಹರುಷವನು ಪೊಂದಿದ ಶ್ರೀ ಹರಿ ||೨||

ಜಯ ಜಯ ಜಯವೆಂದು ಹೂವನು ತಂದು
ಹರಿ ಹರಿ ಹರಿಯೆಂದು ಸುರರೆಲ್ಲ ಸುರಿಸೆ
ಭಯ ನಿವಾರಣ ಭಾಗ್ಯ ಸ್ವರೂಪನೇ
ಪರಮ ಪುರುಶ ಶ್ರೀ ಪುರಂದರ ವಿಟ್ಠಲನೆ ||೩||

22. ಸ್ತ್ರೀಯರೆಲ್ಲರು ಬನ್ನಿರೆ | ಶ್ರೀನಿವಾಸನ ಪಾಡಿರೇ

ಸ್ತ್ರೀಯರೆಲ್ಲರು ಬನ್ನಿರೆ | ಶ್ರೀನಿವಾಸನ ಪಾಡಿರೇ

ಜ್ಞಾನಗುರುಗಳಿಗೊಂದಿಸಿ | ಮುಂದೆ ಕಥೆಯ ಪೇಳುವೆ ||

ಗಂಗಾ ತೀರದಿ ಋಷಿಗಳು | ಅಂದು ಯಾಗವ ಮಾಡ್ದರು
ಬಂದು ನಾರದ ನಿಂತುಕೊಂಡು | ಯಾರಿಗೆಂದು ಕೇಳಲು
ಅರಿತು ಬರಬೇಕು ಎಂದು | ಆ ಮುನಿಯು ತೆರಳಿದ-ಭೃಗುಮುನೀಯು ತೆರಳಿದ
ನಂದಗೋಪನ ಮಗನ ಕಂದನ | ಮಂದಿರಕಾಗೆ ಬಂದನು

ವೇದಗಳನೆ ಓದುತಾ | ಹರಿಯನೂ ಕೊಂಡಾಡುತಾ
ಇರುವ ಬೊಮ್ಮನ ನೋಡಿದ | ಕೈಲಾಸಕ್ಕೆ ಬಂದನು
ಶಂಭುಕಂಠನು ಪಾರ್ವತೀಯೂ | ಕಲೆತಿರುವುದ ಕಂಡನು
ಸೃಷ್ಟಿಯೊಳಗೆ ನಿನ್ನ ಲಿಂಗ | ಶ್ರೇಷ್ಠವಾಗಲೆಂದನು

ವೈಕುಂಠಕ್ಕೆ ಬಂದನು | ವಾರಿಜಾಕ್ಷನ ಕಂಡನು
ಕೆಟ್ಟ ಕೋಪದಿಂದ ಒದ್ದರೆ | ಎಷ್ಟು ನೊಂದಿತೆಂದನು
ತಟ್ಟನೆ ಬಿಸಿನೀರಿನಿಂದ | ನೆಟ್ಟಗೆ ಪಾದ ತೊಳೆದನು
ಬಂದ ಕಾರ್ಯ ಆಯಿತೆಂದು | ಅಂದು ಮುನಿಯು ತೆರಳಿದ

ಬಂದು ನಿಂದು ಸಭೆಯೊಳಗೆ | ಇಂದಿರೇಶನ ಹೊಗಳಿದ
ಪತಿಯ ಕೂಡೆ ಕಲಹ ಮಾಡಿ | ಕೊಲ್ಹಾಪುರಕೆ ಹೋದಳು
ಸತಿಯು ಪೋಗೆ ಪತಿಯು ಹೊರಟು | ಗಿರಿಗೆ ಬಂದು ಸೇರಿದ
ಹುತ್ತದಲ್ಲೆ ಹತ್ತು ಸಾವಿರ ವರುಷ | ಗುಪ್ತವಾಗಿ ಇದ್ದನು

ಬ್ರಹ್ಮ ಧೇನುವಾದನು | ರುದ್ರ ವತ್ಸನಾದನು
ಧೇನು ಮುಂದೆ ಮಾಡಿಕೊಂಡು | ಗೋಪಿ ಹಿಂದೆ ಬಂದಳು
ಕೋಟಿ ಹೊನ್ನು ಬಾಳುವೋದು | ಕೊಡದ ಹಾಲು ಕರೆವುದು
ಪ್ರೀತಿಯಿಂದಲಿ ತನ್ನ ಮನೆಗೆ | ತಂದುಕೊಂಡನು ಚೋಳನು

ಒಂದು ದಿವಸ ಕಂದಗೆ ಹಾಲು | ಚೆಂದದಿಂದಲಿ ಕೊಡಲಿಲ್ಲ
ಅಂದು ರಾಯನ ಮಡದಿ ಕೋಪಿಸಿ | ಬಂದು ಗೋಪನ ಹೊಡೆದಳು
ಧೇನು ಮುಂದೆ ಮಾಡಿಕೊಂಡು | ಗೋಪ ಹಿಂದೆ ನಡೆದನು

ಕಾಮಧೇನು ಕರೆದ ಹಾಲು | ಹರಿಯ ಶಿರಕೆ ಬಿದ್ದಿತು

ಇಷ್ಟು ಕಷ್ಟ ಬಂದಿತೆಂದು | ಪೆಟ್ಟು ಬಡಿಯೆ ಹೋದನು
ಕೃಷ್ಣ ತನ್ನ ಮನದಲ್ಯೋಚಿಸಿ | ಕೊಟ್ಟ ತನ್ನ ಶಿರವನು
ಏಳು ತಾಳೆಮರದ ಉದ್ದ | ಏಕವಾಗಿ ಹರಿಯಿತು
ರಕ್ತವನ್ನು ನೋಡಿ ಗೋಪ | ಮತ್ತೆ ಸ್ವರ್ಗಕ್ಕೇರಿದ

ಕಷ್ಟವನ್ನು ನೋಡಿ ಗೋವು | ಅಷ್ಟು ಬಂದ್-ಹೇಳಿತು
ತಟ್ಟನೆ ರಾಯ ಎದ್ದು ಗಿರಿಗೆ | ಬಂದು ಬೇಗ ಸೇರಿದ
ಏನು ಕಷ್ಟ ಇಲ್ಲಿ ಹೀಗೆ | ಯಾವ ಪಾಪಿ ಮಾಡಿದ
ಇಷ್ಟು ಕಷ್ಟ ಕೊಟ್ಟವಾಗೆ | ಭ್ರಷ್ಟಪಿಶಾಚಿಯಾಗೆಂದ

ಪೆಟ್ಟು ವೇದನೆ ತಾಳಲಾರದೆ | ಬೃಹಸ್ಪತೀಯ ಕರೆಸಿದ
ಅರುಣ ಉದಯದಲ್ಲೆದ್ದು | ಔಷಧಕ್ಕೆ ಪೋದನು
ಕ್ರೋಡರೂಪಿಯ ಕಂಡನು | ಕೂಡಿ ಮಾತನಾಡಿದನು
ಇರುವುದಕ್ಕೆ ಸ್ಥಳವು ಎನಗೆ | ಏರ್ಪಾಡಾಗಬೇಕೆಂದ

ನೂರು ಪಾದ ಭೂಮಿ ಕೊಟ್ಟರೆ | ಮೊದಲು ಪೂಜೆ ನಿಮಗೆಂದ
ಪಾಕ ಪಕ್ವ ಮಾಡುವುದಕ್ಕೆ | ಆಕೆ ಬಕುಳೆ ಬಂದಳು
ಭಾನುಕೋಟಿತೇಜನೀಗ | ಬೇಟೆಯಾಡ ಹೊರಟನು
ಮಂಡೆ ಬಾಚಿ ದೊಂಡೆ ಹಾಕಿ | ದುಂಡುಮಲ್ಲಿಗೆ ಮುಡಿದನು

ಹಾರ ಪದಕ ಕೊರಳಲ್ಹಾಕಿ | ಫಣೆಗೆ ತಿಲಕವಿಟ್ಟನು
ಅಂಗುಲಿಗೆ ಉಂಗುರ | ರಂಗಶ್ವಂಗಾರವಾದವು
ಪಟ್ಟೆನುಟ್ಟು ಕಚ್ಚೆ ಕಟ್ಟಿ | ಪೀತಾಂಬರವ ಹೊದ್ದನು
ಢಾಳು ಕತ್ತಿ ಉಡಿಯಲ್ ಸಿಕ್ಕಿ | ಜೋಡು ಕಾಲಲ್ಲಿ ಮೆಟ್ಟಿದ

ಕರದಿ ವೀಳ್ಯವನ್ನೆ ಪಿಡಿದು | ಕನ್ನಡಿಯ ನೋಡಿದ
ಕನಕಭೂಷಣವಾದ ತೊಡಿಗೆ | ಕಮಲನಾಭ ತೊಟ್ಟನು
ಕನಕಭೂಷಣವಾದ ಕುದುರೆ | ಕಮಲನಾಭ ಏರಿದ
ಕರಿಯ ಹಿಂದೆ ಹರಿಯು ಬರಲು | ಕಾಂತೆರೆಲ್ಲ ಕಂಡರು

ಯಾರು ಇಲ್ಲಿ ಬರುವರೆಂದು | ದೂರ ಪೋಗಿರೆಂದರು
ನಾರಿಯರಿರುವ ಸ್ಥಳಕೆ | ಯಾವ ಪುರುಷ ಬರುವನು

ಎಷ್ಟು ಹೇಳೆ ಕೇಳ ಕೃಷ್ಣ | ಕುದುರೆ ಮುಂದೆ ಬಿಟ್ಟನು
ಅಷ್ಟು ಮಂದೀರೆಲ್ಲ ಸೇರಿ | ಪೆಟ್ಟುಗಳನು ಹೊಡೆದರು

ಕಲ್ಲುಮಳೆಯ ಕರೆದರಾಗ | ಕುದುರೆ ಕೆಳಗೆ ಬಿದ್ದಿತು
ಕೇಶ ಬಿಚ್ಚಿ ವಾಸುದೇವ | ಶೇಷಗಿರಿಗೆ ಬಂದನು
ಪರಮಾನ್ನ ಮಾಡಿದ್ದೇನೆ | ಉಣ್ಣು ಬೇಗ ಎಂದಳು
ಅಮ್ಮ ಎನಗೆ ಅನ್ನ ಬೇಡ | ಎನ್ನ ಮಗನೆ ವೈರಿಯೇ

ಕಣ್ಣಿಲ್ಲಾದ ದೈವ ಅವಳ | ನಿರ್ಮಾಣವ ಮಾಡಿದ
ಯಾವ ದೇಶ ಯಾವೋಳಾಕೆ | ಎನಗೆ ಪೇಳು ಎಂದಳು
ನಾರಾಯಣನ ಪುರಕೆ ಪೋಗಿ | ರಾಮಕೃಷ್ಣರ ಪೂಜಿಸಿ
ಕುಂಜಮಣಿಯ ಕೊರಳಲ್ಹಾಕಿ | ಕೂಸಿನ್ ಕೊಂಕಳಲೆತ್ತಿದಾ

ಧರಣಿದೇವಿಗೆ ಕಣಿಯ ಹೇಳಿ | ಗಿರಿಗೆ ಬಂದು ಸೇರಿದ
ಕಾಂತೆರೆಲ್ಲ ಕೂಡಿಕೊಂಡು | ಆಗ ಬಕುಳೆ ಬಂದಳು
ಬನ್ನಿರೆಮ್ಮ ಸದನಕೆನುತ | ಬಹಳ ಮಾತನಾಡಿದರು
ತಂದೆತಾಯಿ ಬಂಧುಬಳಗ | ಹೊನ್ನು ಹಣ ಉಂಟೆಂದರು

ಇಷ್ಟು ಪರಿಯಲ್ಲಿದ್ದವಗೆ | ಕನ್ಯೆ ಯಾಕೆ ದೊರೆಕಲಿಲ್ಲ
ದೊಡ್ಡವಳಿಗೆ ಮಕ್ಕಳಿಲ್ಲ | ಮತ್ತೆ ಮದುವೆ ಮಾಡ್ವೆವು
ಬೃಹಸ್ಪತೀಯ ಕರೆಸಿದ | ಲಗ್ನಪತ್ರಿಕೆ ಬರೆಸಿದ (ಕಳುಹಿದ)
ಶುಕಾಚಾರ್ಯರ ಕರೆಸಿದ |ಮದುವೆ ಓಲೆ ಬರೆಸಿದ

ವಲ್ಲಭೆಯ ಕರೆವುದಕ್ಕೆ | ಕೊಲ್ಹಾಪುರಕೆ ಪೋದರು
ಗರುಡನ್ ಹೆಗಲನೇರಿಕೊಂಡು | ಬೇಗ ಹೊರಟುಬಂದರು
ಅಷ್ಟವರ್ಗವನ್ನು ಮಾಡಿ | ಇಷ್ಟದೇವರ ಪೂಜಿಸಿ
ಲಕ್ಷ್ಮೀಸಹಿತ ಆಕಾಶರಾಜನ | ಪಟ್ಟಣಕ್ಕೆ ಬಂದರು

ಕನಕಭೂಷಣವಾದ ತೊಡಿಗೆ | ಕಮಲನಾಥ ತೊಟ್ಟನು
ಕನಕಭೂಷಣವಾದ ಮಂಟಪ | ಕಮಲನಾಭ ಏರಿದ
ಕಮಲನಾಭಗೆ ಕಾಂತೆಮಣಿಯ | ಕನ್ಯದಾನವ ಮಾಡಿದ
ಕಮಲನಾಭ ಕಾಂತೆ ಕೈಗೆ | ಕಂಕಣವನ್ನೆ ಕಟ್ಟಿದ

ಶ್ರೀನಿವಾಸ ಪದ್ಮಾವತಿಗೆ | ಮಾಂಗಲ್ಯವಕಟ್ಟಿದ
ಶ್ರೀನಿವಾಸನ ಮದುವೆ ನೋಡೆ | ಸ್ಟೀಯರೆಲ್ಲರು ಬನ್ನಿರೇ
ಪದ್ಮಾವತಿಯ ಮದುವೆ ನೋಡೆ | ಮುದ್ದು ಬಾಲೆಯರ್ ಬನ್ನಿರೇ
ಶಂಕೆಯಿಲ್ಲದೆ ಹಣವ ಸುರಿದು | ವೆಂಕಟೇಶನ ಕಳುಹಿದ

ಲಕ್ಷ ತಪ್ಪು ಎನ್ನಲುಂಟು | ಪಕ್ಷಿವಾಹನ ಸಲಹೆನ್ನ
ಕೋಟಿ ತಪ್ಪು ಎನ್ನಲುಂಟು ಕುಸುಮನಾಭ ಸಲಹೆನ್ನ
ಶಂಕೆಯಿಲ್ಲದೆ ವರವ ಕೊಡುವ ವೆಂಕಟೇಶ ಸಲಹೆನ್ನ
ಭಕ್ತಿಯಿಂದಲಿ ಹೇಳ್ಕೇಳ್ದವರಿಗೆ | ಮುಕ್ತಿ ಕೊಡುವ ಹಯವದನ

ಜಯ ಜಯ ಶ್ರೀನಿವಾಸನಿಗೆ | ಜಯ ಜಯ ಪದ್ಮಾವತಿಗೆ
ಒಲಿದಂತಹ ಶ್ರೀಹರಿಗೆ | ನಿತ್ಯ ಶುಭಮಂಗಳ
ಶೇಷಾದ್ರಿಗಿರಿವಾಸ | ಶ್ರೀದೇವಿ ಅರಸಗೆ
ಕಲ್ಯಾಣಮೂರುತಿಗೆ | ನಿತ್ಯಜಯಮಂಗಳ

23. ಶ್ರೀ ವೇಂಕಟೇಶ ಸ್ತವರಾಜ

ಶ್ರೀರಮಣ ಸರ್ವೇಶ ಸರ್ವಗ ಸಾರಭೋಕ್ತ ಸ್ವತಂತ್ರ ಸರ್ವದ
ಪಾರಮಹಿಮೋದ್ಧಾರ ಸದ್ಗುಣ ಪೂರ್ಣ ಗಂಭೀರ
ಸಾರಿದವರಘ ದೂರಗೈಸಿ ಸೂರಿಜನರಿಗೆ ಸೌಖ್ಯ ನೀಡುವ
ಧೀರವೇಂಕಟರಮಣ ಕರುಣದಿ ಪೊರೆಯೋ ನೀ ಎನ್ನ
ಧೀರವೇಂಕಟರಮಣ ಕರುಣದಿ ಪೊರೆಯೋ ನೀ ಎನ್ನ || ೧ ||

ಘನ್ನಮಹಿಮಾ ಪನ್ನ ಪಾಲಕ ನಿನ್ನ ಹೊರ ತಿನ್ನನ್ಯ ದೇವರ
ಮನ್ನದಲಿ ನಾ ನೆನೆಸೆ ನೆಂದಿಗು ಬನ್ನ ಬಡಿಸದಿರು
ಏನ್ನ ಪಾಲಕ ನೀನೆ ಇರುತಿರೆ ಇನ್ನು ಭವ ಭಯವೇಕೆ ಎನಗೆ
ಚನ್ನ ವೇಂಕಟರಮಣ ಕರುಣದಿ ಪೊರೆಯೋ ನೀ ಎನ್ನ
ಚನ್ನ ವೇಂಕಟರಮಣ ಕರುಣದಿ ಪೊರೆಯೋ ನೀ ಎನ್ನ || ೨ ||

ಲಕುಮಿ ಬೊಮ್ಮ ಭವಾಮರೇಶರು ಭಕುತಿ ಪೂರ್ವಕ ನಿನ್ನ ಭಜಿಸಿ
ಸಕಲ ಲೋಕಕೆ ನಾಥರೆನಿಪರು ಸರ್ವ ಕಾಲದಲಿ
ನಿಖಿಳ ಜೀವರ ಪೋರೆವ ದೇವನೆ ಭಕುತಿ ನೀ ಯೆನಗೀಯ ದಿರಲು
ವ್ಯಕುತವಾಗ್ಯಪಕೀರ್ತಿಬಪ್ಪುದೂ ಶ್ರೀನಿಕೇತನನೆ
ವ್ಯಕುತವಾಗ್ಯಪಕೀರ್ತಿಬಪ್ಪುದೂ ಶ್ರೀನಿಕೇತನನೆ || ೩ ||

ಯಾಕೆ ಪುಟ್ಟದು ಕರುಣ ಎನ್ನೊಳು ಸಾಕಲಾರೆಯ ನಿನ್ನ ಶರಣನ
ನೂಕಿಬಿಟ್ಟರೆ ನಿನಗೆ ಲೋಕದಿ ಖ್ಯಾತಿ ಬಪ್ಪುವುದೇ
ನೋಕನೀಯನೆ ನೀನೆ ಎನ್ನನು ಜೋಕೆಯಿಂದಲಿ ಕಾಯೋ ಬಿಡದೆ
ಏಕದೇವನು ನೀನೆ ವೇಂಕಟ ಶೇಷಗಿರಿವಾಸ
ಏಕದೇವನು ನೀನೆ ವೇಂಕಟ ಶೇಷಗಿರಿವಾಸ || ೪ ||

ಅಂಬುಜಾಂಬಕ ನಿನ್ನ ಪದಯುಗ ನಂಬಿಕೊಂಡೀ ಪರಿಯಲಿರುತಿರೆ
ಡೊಂಬೆಗಾರನ ತೆರದಿ ನೀ ನಿರ್ಭಾಗ್ಯ ಸ್ಥಿತಿ ತೋರೆ
ಬಿಂಬ ಮೂರುತಿ ನಿನ್ನ ಕರಗತ ಕಂಬುವರವೇ ಗತಿಯೋ ವಿಶ್ವಕುಟುಂಬಿ
ಎನ್ನನು ಸಲಹೋ ಸಂತತ ಶೇಷಗಿರಿವಾಸ
ವಿಶ್ವಕುಟುಂಬಿ ಎನ್ನನು ಸಲಹೋ ಸಂತತ ಶೇಷಗಿರಿವಾಸ || ೫ ||

ಸಾರಸಿರಿ ವೈಕುಂಠ ತ್ಯಜಿಸಿ ಧಾರುಣಿಯೊಳು ಗೊಲ್ಲನಾಗಿ
ಚೋರ ಕರ್ಮವ ಮಾಡಿ ಬದುಕಿಹ ದಾರಿಗರಿ ಕಿಲ್ಲ
ಸಾರಿ ಪೇಳುವೆ ನಿನ್ನ ಗುಣಗಳ ಪಾರವಾಗಿರುತಿಹೊ ಜನರಿಗೆ

ಧೀರ ವೇಂಕಟರಮಣ ಕರುಣದಿ ಪೊರೆಯೊ ನೀ ಯೆನ್ನ
ಧೀರ ವೇಂಕಟರಮಣ ಕರುಣದಿ ಪೊರೆಯೊ ನೀ ಯೆನ್ನ || ೬ ||

ನೀರ ಮುಳುಗಿ ಭಾರಪೊತ್ತು ಧಾರುಣೀತಳವಗೆದು ಸಿಟ್ಟಿಲಿ
ಕ್ರೂರನುದರವ ಸೀಳಿ ಕರುಳಿನ ಮಾಲೆ ಧರಿಸಿದರು
ಪೋರ ವಿಪ್ರ ಕುಠಾರಿ ವನವನ ಜಾರಿ ಗೋಪ ದಿಗಂಬರಾಶ್ವವ
ಏರಿ ಪೋದರು ಬಿಡೆನೋ ವೇಂಕಟ ಶೇಷಗಿರಿವಾಸ
ಅಶ್ವವ ಏರಿ ಪೋದರು ಬಿಡೆನೋ ವೇಂಕಟ ಶೇಷಗಿರಿವಾಸ || ೭ ||

ಲಕ್ಷ್ಮಿನಾಯಕ ಸಾರ್ವ ಭೌಮನೆ ಪಕ್ಷಿವಾಹನ ಪರಮ ಪುರುಷನೆ
ಮೋಕ್ಷದಾಯಕ ಪ್ರಾಣ ಜನಕನೆ ವಿಸ್ವ ವ್ಯಾಪಕನೆ
ಅಕ್ಷಯಾಂಬರವಿತ್ತು ವಿಜಯನ ಪಕ್ಷಪಾತವ ಮಾಡಿಕುರುಗಳ
ಲಕ್ಷ್ಯಮಾಡದೆ ಕೊಂದೆಯೊ ಶ್ರೀ ಶೇಷಗಿರಿವಾಸ
ಲಕ್ಷ್ಯಮಾಡದೆ ಕೊಂದೆಯೊ ಶ್ರೀ ಶೇಷಗಿರಿವಾಸ || ೮ ||

ಹಿಂದೆ ನೀ ಪ್ರಹ್ಲಾದಗೋಸುಗ ಎಂದು ನೋಡದ ರೂಪ ಧರಿಸಿ
ಬಂದು ದೈತ್ಯನ ಒಡಲ ಬಗೆದು ಪೊರೆದೆ ಬಾಲಕನ
ತಂದೆತಾಯ್ಗಳ ಬಿಟ್ಟು ವಿಪಿನದಿ ನಿಂದು ತಪಿಸುವ ಪಂಚವತ್ಸರ
ಕಂದನಾ ಧ್ರುವ ಗೊಲಿದು ಪೊರೆದೆಯೊ ಶೇಷಗಿರಿವಾಸ
ಕಂದನಾ ಧ್ರುವ ಗೊಲಿದು ಪೊರೆದೆಯೊ ಶೇಷಗಿರಿವಾಸ || ೯ ||

ಮಡುವಿನೊಳಗಿಹ ಮಕರಿ ಕಾಲನು ಪಿಡಿದು ಬಾಧಿಸೆ ಕರಿಯು ತ್ರಿಜಗ
ದ್ವಡೆಯ ಪಾಲಿಸೊ ಎನಲು ತಕ್ಷಣ ಬಂದು ಪಾಲಿಸಿದೆ
ಮಡದಿ ಮಾತನು ಕೇಳಿ ಬಲು ಪರಿ ಭಡವ ಬ್ರಾಹ್ಮಣ ಧಾನ್ಯ ಕೋಡಲು
ಪೋಡವಿಗಸದಳ ಭಾಗ್ಯನೀಡಿದೆ ಶೇಷಗಿರಿವಾಸ
ಪೋಡವಿಗಸದಳ ಭಾಗ್ಯನೀಡಿದೆ ಶೇಷಗಿರಿವಾಸ || ೧೦ ||

ಪಿಂತುಮಾಡಿದ ಮಹಿಮೆಗಳ ನಾನೆಂತು ವರ್ಣಿಸಲೇನು ಫಲ ಶ್ರೀ
ಕಾಂತ ಎನ್ನನು ಪೊರೆಯೆ ಕೀರುತಿ ನಿನಗೆ ಫಲವೆನಗೆ
ಕಂತುಜನಕನೆ ಎನ್ನ ಮನಸಿನ ಅಂತರಂಗದಿ ನೀನೆ ಸರ್ವದ
ನಿಂತು ಪ್ರೇರಣೆ ಮಾಳ್ಪೆ ಸರ್ವದ ಶೇಷಗಿರಿವಾಸ
ನಿಂತು ಪ್ರೇರಣೆ ಮಾಳ್ಪೆ ಸರ್ವದ ಶೇಷಗಿರಿವಾಸ || ೧೧ ||

ಜಯ ಜಯತು ಶಠ ಕೂರ್ಮ ರೂಪನೆ ಜಯ ಜಯತು ಕಿಟಿ ಸಿಂಹ ವಾಮನ

ಜಯ ಜಯತು ಭೃಗುರಾಮ ರಘುಕುಲಸೋಮ ಶ್ರೀರಾಮ
ಜಯ ಜಯತು ಶಿರಿ ಯದುವರೇಣ್ಯನೆ ಜಯ ಜಯತು ಜನಮೋಹ ಬುದ್ಧನೆ
ಜಯ ಜಯತು ಕಲಿಕಲ್ಮಷಘ್ನನೆ ಕಲ್ಕಿನಾಮಕನೆ
ಜಯ ಜಯತು ಕಲಿಕಲ್ಮಷಘ್ನನೆ ಕಲ್ಕಿನಾಮಕನೆ || ೧೮ ||

ಕರುಣ ಸಾಗರ ನೀನೆ ನಿಜಪದ ಶರಣವತ್ಸಲ ನೀನೆ ಶಾಶ್ವತ
ಶರಣಜನ ಮಂದಾರ ಕಮಲಾಕಾಂತ ಜಯವಂತ
ನಿರುತ ನಿನ್ನನು ನುತಿಸಿ ಪಾಡುವೆ ವರದ ಗುರುಜಗನ್ನಾಥವಿಠ್ಠಲ
ಪರಮ ಪ್ರೇಮದಿ ಪೊರೆಯೊ ಎನ್ನನು ಶೇಷಗಿರಿವಾಸ
ಪರಮ ಪ್ರೇಮದಿ ಪೊರೆಯೊ ಎನ್ನನು ಶೇಷಗಿರಿವಾಸ || ೧೯ ||

24. ನಿನ್ನ ಒಲುಮೆಯಿಂದ ನಿಖಿಳ ಜನರು ಬಂದು ಮನ್ನಿಸುವರೊ ಮಹರಾಯ

ನಿನ್ನ ಒಲುಮೆಯಿಂದ ನಿಖಿಳ ಜನರು ಬಂದು ಮನ್ನಿಸುವರೊ ಮಹರಾಯ
ಎನ್ನ ಪುಣ್ಯಗಳಿಂದ ಈ ಪರಿ ಉಂಟೇನೋ ನಿನ್ನದೇ ಸಕಲ ಸಂಪತ್ತು ||ಪಲ್ಲವಿ||

ಜೀರ್ಣ ಮಲಿನ ವಸ್ತ್ರ ಕಾಣದ ಮನುಜಗೆ ಪೂರ್ಣ ವಿಚಿತ್ರ ಸುವಸನ
ವರ್ಣವರ್ಣದಿಂದ ಬಾಹೋದೇನೊ ಸಂಪೂರ್ಣ ಗುಣಾರ್ಣವ ದೇವಾ
ಸಂಜೀತನಕ ಇದ್ದು ಸಣ್ಣ ಸವಟು ತುಂಬ ಗಂಜಿ ಕಾಣದೆ ಬಳಲಿದೆನೊ
ವ್ಯಂಜನ ನಾನಾ ಸುಭಕ್ಷ್ಯ ಭೋಜ್ಯಂಗಳ ಭುಂಜಿಸುವದು ಮತ್ತೇನೋ ||1||

ಒಬ್ಬ ಹೆಂಗಸಿಗೆ ಅನ್ನ ಹಾಕುವದಕ್ಕೆ ತಬ್ಬಿಬ್ಬುಗೊಂಡೆ ನಾ ಹಿಂದೆ
ನಿಬ್ಬರದಲಿ ಸರ್ವರ ಕೂಡಿನ್ನು ಹಬ್ಬವನುಂಡೆನೊ ಹರಿಯೆ
ಮನೆಮನೆ ತಿರುಗಿದೆ ಕಾಸು ಪುಟ್ಟದೆ ಸುಮ್ಮನೆ ಚಾಲ್ವರಿದು ಬಳಲಿದೆನೋ
ಹಣ ಹೊನ್ನು ದ್ರವ್ಯ ಒಮ್ಮಿಂದೊಮ್ಮೆ ಈಗ ಎನಗೆ ಪ್ರಾಪುತಿ ನೋಡೋ ಜೀಯ ||2||

ಮಧ್ಯಾಹ್ನ ಕಾಲಕ್ಕೆ ಅತಿಥಿಗಳಿಗೆ ಅನ್ನ ಮೆದ್ದೆನೆಂದರೆ ಈಯದಾದೆ
ಈ ಧರೆಯೊಳು ಸತ್ಪಾತ್ರರಿಗುಣಿಸುವ ಪದ್ಧತಿ ನೋಡೊ ಧರ್ಮಾತ್ಮ
ನೀಚೋಚ್ಚ ತಿಳಿಯದೆ ಸರ್ವರ ಚರಣಕೆ ಚಾಚಿದೆ ನೊಸಲು ಹಸ್ತಗಳ
ಯೋಚಿಸಿ ನೋಡಲು ಸೋಜಿಗವಾಗಿದೆ ವಾಚಕೆ ನಿಲುಕದೊ ಹರಿಯೆ ||3||

ವೈದಿಕ ಪದವಿಯ ಕೊಡುವನಿಗೆ ಲೌಕಿಕನೈದಿಸುವುದು ಮಹಾಖ್ಯಾತಿ
ಮೈದುನಗೊಲಿದ ಶ್ರೀ ವಿಜಯವಿಠಲ ನಿನ್ನ ಪಾದ ಸಾಕ್ಷಿಯೆ ಅನುಭವವೊ ||4||

25. ನಿನ್ನ ದರುಶನಕೆ ಬಂದವನಲ್ಲವೊ

ನಿನ್ನ ದರುಶನಕೆ ಬಂದವನಲ್ಲವೊ
ಪುಣ್ಯವಂತರ ದಿವ್ಯ ಚರಣ ನೋಡಲು ಬಂದೆ ||ಪ||

ಎಲ್ಲಿ ನೋಡಲು ನೀನೆ ವ್ಯಾಪ್ತನಾಗಿರಲಿಕ್ಕೆ
ಇಲ್ಲಿಗೆ ಬಾಹ ಕಾರಣವಾವುದೊ
ಸೊಲ್ಲಿಗೆ ಕಂಭದೊಳು ತೋರಿದ ಮಹಾಮಹಿಮ
ಅಲ್ಲಿ ಇಲ್ಲೇನಯ್ಯ ಬಲ್ಲ ಭಕುತ ಜನರಿಗೆ ||1||

ಕರೆದಾಗಲೆ ಓಡಿ ಬಂದೊದಗುವ ದೇವ
ಮರಳಿ ಗಾವುದ ಎಣಿಸಿ ಬರಲ್ಯಾತಕೊ
ನೆರೆನಂಬಿದವರಿಗಾವಲ್ಲಿ ಆದರೆ ಏನು
ಅರಿತವರ ಮನದಲ್ಲಿ ನಿಂದಾಡುವಾ ಚಂದವಾ ||2||

ಧ್ಯಾನಕ್ಕೆ ಸಿಲುಕುವನೆ ನಿನ್ನ ಕಾಣಲಿಬಹುದು
ಜ್ಞಾನಿಗಳು ಎಂತು ಬರುವರೊ ಅಲ್ಲಿಗೆ
ಅನಂತ ಜನುಮದಲಿ ಜಪ ತಪ ವ್ರತ ಹೋಮ
ಏನು ಮಾಡಿದರಿಷ್ಟು ಜನ ಕೂಡುವದೋ ದೇವಾ ||3||

ನೀನಿದ್ದ ಸ್ಥಾನದಲಿ ಸರ್ವ ಪುಣ್ಯಕ್ಷೇತ್ರ
ನೀನಿದ್ದ ಸ್ಥಾನದಲಿ ಸಕಲತೀರ್ಥ
ನೀನಿದ್ದ ಸ್ಥಾನದಲಿ ಸಮಸ್ತ ತಾತ್ವಿಕರು
ನಾನಿತ್ತ ಬರುವುದು ನಿನಗೆ ತಿಳಿಯದೆ ಸ್ವಾಮಿ ||4||

ಇದನೆ ಲಾಲಿಸು ಜೀಯಾ ನಿನ್ನದೊಂದೇ ಮೂರ್ತಿ
ನಿದರುಶನವಲ್ಲದೆ ಮಿಗಿಲಾವುದೊ
ಪದೇ ಪದೇ ಮಧ್ವಮತ ಹೊಂದಿದ ಸುಜನರ
ಹೃದಯದಲಿ ಒಂದೊಂದು ಪರಿ ನಿನ್ನ ರೂಪಂಗಳು ||5||

ಭಳಿರೆ ತಿರುಮಲರಾಯ ನಿನ್ನ ಕರುಣಾ ರಸಕೆ
ನೆಲೆಗಾಣೆ ನೆಲೆಗಾಣೆ ನೆರೆಹೊರೆಯಲಿ
ಒಲಿದು ಭಕುತರಿಗಾಗಿ ಮದುವೆ ಹವಣಿಸಿಕೊಂಡೆ
ಸುಲಭ ದೇವರ ದೇವ ವಿಜಯ ವಿಠಲ ವೆಂಕಟಾ ||6||

26. ದಾಸೋಹಂ ತವ ದಾಸೋಹಂ ತವ

ದಾಸೋಹಂ ತವ ದಾಸೋಹಂ ತವ
ದಾಸೋಹಂ ತವ ದಾಸೋಹಂ ||ಪ||

ವಾಸುದೇವ ವಿಗತಾಘಸಂಘ ತವ ||ಅ. ಪ||

ಜೀವಾಂತರ್ಗತ ಜೀವ ನಿಯಾಮಕ
ಜೀವ ವಿಲಕ್ಷಣ ಜೀವನದ
ಜೀವಾಧಾರಕ ಜೀವರೂಪ ರಾ-
ಜೀವ ಭವಜನಕ ಜೀವೇಶ್ವರ ತವ ||೧||

ಕಾಲಾಂತರ್ಗತ ಕಾಲನಿಯಮಕ
ಕಾಲಾತೀತ ತ್ರಿಕಾಲಜ್ಞ
ಕಾಲ ಪ್ರವರ್ತಕ ಕಾಲನಿವರ್ತಕ
ಕಾಲೋತ್ಪಾದಕ ಕಾಲಮೂರ್ತಿ ತವ ||೨||

ಕರ್ಮಕರ್ಮಕೃತ ಕರ್ಮಕೃತಾಗಮ
ಕರ್ಮ ಫಲಪ್ರದ ಕರ್ಮಜಿತ
ಕರ್ಮಬಂಧ ಮಹ ಕರ್ಮವಿಮೋಚಕ
ಕರ್ಮನಿಗ್ರಹ ಕರ್ಮಸಾಕ್ಷಿ ತವ ||೩||

ಧರ್ಮಯೂಪ ಮಹ ಧರ್ಮವಿವರ್ಧನ
ಧರ್ಮವಿದೊತ್ತಮ ಧರ್ಮನಿಧೇ
ಧರ್ಮಸೂಕ್ಷ್ಮ ಮಹ ಧರ್ಮಸಂರಕ್ಷಕ
ಧರ್ಮಸಾಕ್ಷಿ ಯಮಧರ್ಮಪುತ್ರ ತವ || ೪||

ಮಂತ್ರಯಂತ್ರ ಮಹ ಮಂತ್ರ ಬೀಜ ಮಹ
ಮಂತ್ರ ರಾಜಗುರು ಮಂತ್ರಧೃತ
ಮಂತ್ರಮೇಯ ಮಹ ಮಂತ್ರನಿಯಾಮಕ
ಮಂತ್ರದೇವ ಜಗನ್ನಾಥ ವಿಠಲ ತವ ||೫||

27. ದಾಸನಾಗು ವಿಶೇಷನಾಗು

ದಾಸನಾಗು ವಿಶೇಷನಾಗು
ಏಸು ಕಾಯಂಗಳ ಕಳೆದು ಎಂಬತ್ನಾಲ್ಕು ಲಕ್ಷ
ಜೀವರಾಶಿಯನ್ನು ದಾಟಿ ಬಂದ ಈ ಶರೀರ
ತಾನಲ್ಲ ತನ್ನದಲ್ಲ ತಾನಲ್ಲ ತನ್ನದಲ್ಲ
ಆಸೆ ಥರವಲ್ಲ ಮುಂದೆ ಬಹುದಲ್ಲ
ದಾಸನಾಗು ವಿಶೇಷನಾಗು ದಾಸನಾಗು ವಿಶೇಷನಾಗು

ಆಶ-ಕ್ಲೇಶ- ದೋಷವೆಂಬ ಅಬ್ಧಿಯೊಳು ಮುಳುಗಿ ಯಮನ
ಪಾಶಕ್ಕೊಳಗಾಗದೆ ನಿರ್ದೋಷಿಯಾಗು ಸಂತೋಷಿಯಾಗು
ಕಾಶಿವಾರಣಾಸಿ ಕಂಚಿ ಕಾಣ- ಹಸ್ತಿ ರಾಮೇಶ್ವರ
ಏಸು ದೇಸ ತಿರುಗಿದರೆ ಬಹುದೇನೋ ಅಲ್ಲಿ ಹೋದೇನೋ
ದೋಷ ನಾಶಿ ಕೃಷ್ಣೆ ಗಂಗೆ ಗೋದಾವರಿ ಭವನಾಶಿ
ತುಂಗಭದ್ರೆ ಯಮುನೆ ವಾಸದಲ್ಲಿ ಉಪವಾಸದಲ್ಲಿ
ಮೀಸಲಾಗಿ ಮಿಂದು ಜಪ ತಪ ಹೋಮ ನೇಮಗಳ
ಏಸು ಬರಿ ಮಾಡಿದರು ಫಲವೇನು? ಈ ಫಲವೇನು?
ದಾಸನಾಗು ವಿಶೇಷನಾಗು ದಾಸನಾಗು ವಿಶೇಷನಾಗು

ಅಂದಿಗೋ ಇಂದಿಗೋ ಒಮ್ಮೆ ಸಿರಿಕಮಲೇಶನನ್ನು
ಒಂದು ಬಾರಿಯಾರು ಹಿಂದ ನೆನೆಯಲಿಲ್ಲ ಮನದಣಿಯಲಿಲ್ಲ
ಬಂದು ಬಂದು ಭ್ರಮೆಗೊಂಡು ಮಾಯಾಮೋಹಕ್ಕೆ ಸಿಕ್ಕಿ
ನೊಂದು ಬೆಂದು ಒಂದರಿಂದ ಉಳಿಯಲಿಲ್ಲ ಬಂಧ ಕಳೆಯಲಿಲ್ಲ
ಸಂದೇಹವ ಮಾಡದಿರು ಅರಿವು ಎಂಬ ದೀಪವಿಟ್ಟು
ಇಂದು ಕಂಡ್ಯ ದೇಹದಲ್ಲಿ ಪಿಂಡಾಂಡ ಹಾಗೆ ಬ್ರಹ್ಮಾಂಡ
ಇಂದು ಹರಿಯ ಧ್ಯಾನವನ್ನು ಮಾಡಿ ವಿವೇಕದಿ
ಮುಕುಂದನಿಂದ ಮುಕ್ತಿ ಬೇಡು ಕಂಡ್ಯ ನೀ ನೋಡು ಕಂಡ್ಯ
ದಾಸನಾಗು ವಿಶೇಷನಾಗು ದಾಸನಾಗು ವಿಶೇಷನಾಗು

ನೂರು ಬಾರಿ ಶರಣು ಮಾಡಿ ನೀರ ಮುಳುಗಲ್ಯಾಕೆ
ಪರ ನಾರಿಯರ ನೋಟಕೆ ಗುರಿಯ ಮಾಡಿದಿ ಮನ ಸೆರೆಯ ಮಾಡಿದಿ
ಸುರೆಯೊಳು ಸುರೆ ತುಂಬಿ ಮೇಲೆ ಹೂವಿನ ಹಾರ
ಗೀರು ಗಂಧ ಅಕ್ಷತೆಯ ಧರಿಸಿದಂತೆ ನೀ ಮೆರೆಸಿದಂತೆ
ಗಾರುಢಿಯ ಮಾತ ಬಿಟ್ಟು ನಾದಬ್ರಹ್ಮನ ಪಿಡಿದು
ಸಾರಿ ಸೂರಿ ಮುಕ್ತಿಯನ್ನು ಶಮನದಿಂದ ಮತ್ತೆ ಸುಮನದಿಂದ
ನಾರಾಯಣ ಅಚ್ಯುತ ಅನಂತಾದಿ ಕೇಶವನ
ಸಾರಾಮ್ರಿತವನುಂಡು ಸುಖಿಸೋ ಲಂಡ ಜೀವವೇ ಎಲೋ ಭಂಡ ಜೀವವೇ
ದಾಸನಾಗು ವಿಶೇಷನಾಗು ದಾಸನಾಗು ವಿಶೇಷನಾಗು

28. ಕುರು ಭುಂಕ್ಷ್ವ ಚ ಕರ್ಮ ನಿಜಂ ನಿಯತಂ ಹರಿಪಾದ ವಿನಮ್ರ ಧಿಯಾ ಸತತಮ್

ಕುರು ಭುಂಕ್ಷ್ವ ಚ ಕರ್ಮ ನಿಜಂ ನಿಯತಂ ಹರಿಪಾದ ವಿನಮ್ರ ಧಿಯಾ ಸತತಮ್ |
ಹರಿರೇವ ಪರೋ ಹರಿರೇವಗುರು ಹರಿರೇವ ಜಗತ್ಪಿತೃ ಮಾತೃಗತಿಃ || ೧ ||

ನತತೋಽನ್ಯಪರಂ ಜಗದೀಡ್ಯ ತಮಂ ಪರಮಾತ್ ಪರತಃ ಪುರುಷೋತ್ತಮತಃ |
ತದಲಂ ಬಹುಲೋಕ ವಿಚಿಂತನಯಾ ಪ್ರಣವಂ ಕುರು ಮಾನಸಮೀಶ ಪದೇ || ೨ ||

ಯತತೋಽಪಿ ಹರೇಃ ಪದ ಸಂಸ್ಮರಣೇ ಸಕಲಂ ಹ್ಯಘಮಾಶು ಲಯಂ ವ್ರಜತಿ |
ಸ್ಮರತಸ್ತು ವಿಮುಕ್ತಿ ಪದಂ ಪರಮಂ ಸ್ಫುಟ ಮೇಷ್ಯತಿ ತತ್ ಕಿಮು ಪಾಕ್ರಿಯತೇ || ೩ ||

ಶೃಣು ತಾಮಲ ಸತ್ಯವಚಃ ಪರಮಂ ಶಪಥೇರಿತ ಮುಚ್ಛ್ರಿತ ಬಾಹು ಯುಗಮ್ |
ನಹರೇಃ ಪರಮೋ ನಹರೇಃ ಸದೃಶಃ ಪರಮಃ ಸತುಸರ್ವ ಚಿದಾತ್ಮಗಣಾತ್ || ೪ ||

ಯದಿ ನಾಮ ಪರೋ ನ ಭವೇತ್ ಸ ಹರಿಃ ಕಥಮಸ್ಯ ವಶೇ ಜಗದೇತದಭೂತ್ |
ಯದಿ ನಾಮ ನ ತಸ್ಯ ವಶೇ ಸಕಲಂ ಕಥಮೇವ ತು ನಿತ್ಯ ಸುಖಂ ನ ಭವೇತ್ || ೫ ||

ನ ಚ ಕರ್ಮ ವಿಮಾಮಲ ಕಾಲಗುಣ ಪ್ರಭೃತೀಶಮ ಚಿತ್ತನು ತದ್ದಿ ಯತಃ |
ಚಿದಚಿತ್ತನು ಸರ್ವಮಸೌ ತು ಹರಿರ್ಯಮಯೇ ದಿತಿ ವೈದಿಕಮಸ್ತಿ ವಚಃ || ೬ ||

ವ್ಯವಹಾರಭಿದಾಽಪಿ ಗುರೋರ್ಜಗತಾಂ ನ ತು ಚಿತ್ತಗತಾ ಸಹಿ ಚೋದ್ಯಪರಮ್ |
ಬಹವಃ ಪುರುಷಾಃ ಪುರುಷಪ್ರವರೋ ಹರಿರಿತ್ಯವದತ್ ಸ್ವಯಮೇವ ಹರಿಃ || ೭ ||
ಚತುರಾನನ ಪೂರ್ವ ವಿಮುಕ್ತ ಗಣಾ ಹರಿಮೇತ್ಯ ತು ಪೂರ್ವ ವದೇವ ಸದಾ |
ನಿಯತೋಚ್ಚವಿನೀಚತ ಯೈವ ನಿಜಾಂ ಸ್ಥಿತಿಮಾಪುರಿತಿ ಸ್ಮ ಪರಂ ವಚನಮ್ || ೮ ||

ಆನಂದತೀರ್ಥ ಸನ್ನಾಮ್ನಾ ಪೂರ್ಣ ಪ್ರಜ್ಞಾಭಿ ಧಾಯುಜಾ |
ಕೃತಂ ಹರ್ಯಷ್ಟಕಂ ಭಕ್ತ್ಯಾ ಪಠತಃ ಪ್ರೀಯತೇ ಹರಿಃ || ೯ ||

29. ವಂದಿತಾಶೇಷ ವಂದ್ಯೋರು ವೃಂದಾರಕಂ

ವಂದಿತಾಶೇಷ ವಂದ್ಯೋರು ವೃಂದಾರಕಂ
ಚಂದನ ಚರ್ಚಿತೋ ದಾರಪೀನಾಂಸಕಂ |
ಇಂದಿರ ಚಂಚಲ ಪಾಂಗನೀರಾಜಿತಂ
ಮಂದರೋದ್ಧಾರಿ ವೃತ್ತೋದ್ಭುಜಾಭೋಗಿನಂ |
ಪ್ರೀಣಯಾಮೋ ವಾಸುದೇವಂ
ದೇವತಾಮಂಡಲಾ ಖಂಡಮಂಡನಂ
ಪ್ರೀಣಯಾಮೋ ವಾಸುದೇವಂ ||

ಸೃಷ್ಟಿ ಸಂಹಾರ ಲೀಲಾವಿಲಾಸಾತತಂ
ಪುಷ್ಟ ಷಾಡ್ಗುಣ್ಯ ಸದ್ವಿಗ್ರಹೋಲ್ಲಾಸಿನಮ್ |
ದುಷ್ಟ ನಿಷ್ಯೇಷ ಸಂಹಾರಕ ಮೋದ್ಯತಂ
ಹೃಷ್ಟ ಪುಷ್ಟಾನುಶಿಷ್ಟ ಪ್ರಜಾಸಂಶ್ರಯಂ ||
ಪ್ರೀಣಯಾಮೋ ವಾಸುದೇವಂ
ದೇವತಾಮಂಡಲಾ ಖಂಡಮಂಡನಂ
ಪ್ರೀಣಯಾಮೋ ವಾಸುದೇವಂ ||

ಉನ್ನತ ಪ್ರಾರ್ಥಿತಾ ಶೇಷ ಸಂಸಾಧಕಂ
ಸನ್ನತಾಲೌಕಿಕಾ ನಂದದ ಶ್ರೀಪದಮ್ |
ಭಿನ್ನ ಕರ್ಮಾಶಯ ಪ್ರಾಣಿಸಂಪ್ರೇರಕಂ
ತನ್ನಕಿಂನೇತಿ ವಿದ್ವತ್ಸು ಮಿಮಾಂಸಿತಂ||
ಪ್ರೀಣಯಾಮೋ ವಾಸುದೇವಂ
ದೇವತಾಮಂಡಲಾ ಖಂಡಮಂಡನಂ
ಪ್ರೀಣಯಾಮೋ ವಾಸುದೇವಂ ||

ವಿಪ್ರಮುಖ್ಯೈಃ ಸದಾವೇದವಾದೋನ್ಮುಖೈಃ
ಸುಪ್ರತಾಪೈಃ ಕ್ಷಿತಿಶೇಶ್ವರೈಶ್ಚಾರ್ಚಿತಂ |
ಅಪ್ರತಕ್ಯೋರು ಸಂವಿದ್ಗುಣಂ ನಿರ್ಮಲಂ
ಸಪ್ರಕಾಶಾಜರಾನಂದ ರೂಪಂಪರಂ ||
ಪ್ರೀಣಯಾಮೋ ವಾಸುದೇವಂ
ದೇವತಾಮಂಡಲಾ ಖಂಡಮಂಡನಂ
ಪ್ರೀಣಯಾಮೋ ವಾಸುದೇವಂ ||

ಅತ್ಯಯೋ ಯಸ್ಯ ಕೇನಾಪಿನಕ್ವಾಪಿಹಿ
ಪ್ರತ್ಯತೋ ಯದ್ಗುಣೇಷೂತ್ತಮಾನಾಂಪರಃ |
ಸತ್ಯಸಂಕಲ್ಪ ಏಕೋ ವರೋಣ್ಯೋ
ವಶೀ ಮತ್ಯನೂನೈಃ ಸದಾ ವೇದವಾದೋದಿತಃ ||

ಪ್ರೀಣಯಾಮೋ ವಾಸುದೇವಂ
ದೇವತಾಮಂಡಲಾ ಖಂಡಮಂಡನಂ
ಪ್ರೀಣಯಾಮೋ ವಾಸುದೇವಂ ||

ಪಶ್ಯತಾಂ ದುಃಖ ಸಂತಾನ ನಿರ್ಮೂಲನಂ
ದೃಶ್ಯತಾಂ ದೃಶ್ಯತಾಮಿತ್ಯ ಜೇಶಾಚಿ(ರ್ಧಿ)ತಮ್ |
ನಶ್ಯತಾಂ ದೂರಗಂ ಸರ್ವದಾಪ್ಯಾತ್ಮಗಂ
ಪಶ್ಯತಾಂ ಸ್ವೇಚ್ಚಯಾ ಸಜ್ಜನೇಷ್ವಾಗತಂ ||
ಪ್ರೀಣಯಾಮೋ ವಾಸುದೇವಂ
ದೇವತಾಮಂಡಲಾ ಖಂಡಮಂಡನಂ
ಪ್ರೀಣಯಾಮೋ ವಾಸುದೇವಂ ||

ಅಗ್ರಜಂ ಯಃ ಸಸರ್ಜಾಜಮಗ್ರ್ಯಾಕೃತಿಂ
ವಿಗ್ರಹೋಯಸ್ಯ ಸರ್ವೇಗುಣಾ ಏವ ಹಿ |
ಉಗ್ರ ಆದ್ಯೋಽಪಿ ಯಸ್ಯಾತ್ಮಜಾಗ್ರ್ಯಾತ್ಮಜಃ
ಸದ್ಗೃಹೀತಃ ಸದಾಯಃ ಪರಂದೈವತಮ್ ||
ಪ್ರೀಣಯಾಮೋ ವಾಸುದೇವಂ
ದೇವತಾಮಂಡಲಾ ಖಂಡಮಂಡನಂ
ಪ್ರೀಣಯಾಮೋ ವಾಸುದೇವಂ ||

ಧಾರ್ಯತೇ ಯೇನವಿಶ್ವಂ ಸದಾಜಾದಿಕಂ
ವಾರ್ಯತೇ ಶೇಷ ದುಃಖಂ ನಿಜಧ್ಯಾಯಿನಾಂ |
ಪಾರ್ಯತೇ ಸರ್ವಮನ್ಯೈರ್ನಯತ್ಪಾರ್ಯತೇ
ಕಾರ್ಯತೇ ಚಾಖಿಲಂ ಸರ್ವಭೂತೈಃ ಸದಾ ||
ಪ್ರೀಣಯಾಮೋ ವಾಸುದೇವಂ
ದೇವತಾಮಂಡಲಾ ಖಂಡಮಂಡನಂ
ಪ್ರೀಣಯಾಮೋ ವಾಸುದೇವಂ ||

ಸರ್ವಪಾಪಾನಿ ಯತ್ಸಂಸ್ಮೃತೇಃ ಸಂಕ್ಷಯ
ಸರ್ವದಾ ಯಾಂತಿಭಕ್ತ್ಯಾವಿಶುದ್ಧಾತ್ಮನಾಂ |
ಶರ್ವಗುರ್ವಾದಿಗೀರ್ವಾಣ ಸಂಸ್ಥಾನದಃ
ಕುರ್ವತೇ ಕರ್ಮ ಯತ್ಪ್ರೀತಯೆ ಸಜ್ಜನಾಃ ||
ಪ್ರೀಣಯಾಮೋ ವಾಸುದೇವಂ
ದೇವತಾಮಂಡಲಾ ಖಂಡಮಂಡನಂ
ಪ್ರೀಣಯಾಮೋ ವಾಸುದೇವಂ ||

ಅಕ್ಷಯಂ ಕರ್ಮಯಸ್ಮಿನ್ ಪರೇಸ್ವರ್ಪಿತಂऽ
ಪ್ರಕ್ಷ ಯಂ ಯಾಂತಿ ದುಃಖಾನಿಃಯನ್ನಾಮತ |

ಅಕ್ಷರೋಯೋಽಜರಃ ಸರ್ವದೈವಾಮೃತಃ
ಕುಕ್ಷಿಗಂ ಯಸ್ಯ ವಿಶ್ವಂ ಸದಾಜಾದಕಮ್ ||
ಪ್ರೀಣಯಾಮೋ ವಾಸುದೇವಂ
ದೇವತಾಮಂಡಲಾ ಖಂಡಮಂಡನಂ
ಪ್ರೀಣಯಾಮೋ ವಾಸುದೇವಂ ||

ನಂದಿತೀರ್ಥೋರುಸನ್ನಾಮಿನೋ ನಂದಿನಃ
ಸಂದಧಾನಾಃ ಸದಾನಂದದೇವೇ ಮತಿಮ್ |
ಮಂದಹಾಸಾರುಣಾಪಾಂಗ ದತ್ತೋನ್ನತಿಂ
ನ(ವಂ)ದಿತಾ ಶೇಷದೇವಾದಿ ವೃಂದಂ ಸದಾ ||
ಪ್ರೀಣಯಾಮೋ ವಾಸುದೇವಂ
ದೇವತಾಮಂಡಲಾ ಖಂಡಮಂಡನಂ
ಪ್ರೀಣಯಾಮೋ ವಾಸುದೇವಂ ||

30. ಅವನ ಶ್ರೀಪತಿ ರಪ್ರತಿ ರಧಿ ಕೇಶಾದಿ ಭವಾದೇ

ಅವನ ಶ್ರೀಪತಿ ರಪ್ರತಿ ರಧಿ ಕೇಶಾದಿ ಭವಾದೇ |
ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ || ೧ ||

ಸುರ ವಂದ್ಯಾಧಿಪ ಸದ್ವರ ಭರಿತಾ ಶೇಷ ಗುಣಾಲವಮ್
ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ || ೨ ||

ಸಕಲ ಧ್ವಾಂತ ವಿನಾಶಕ ಪರಮಾನಂದ ಸುಧಾಹೋ |
ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ || ೩ ||

ತ್ರಿಜಗತ್ಪೋತ ಸದಾರ್ಚಿತ ಚರಣಾ ಶಾಪತಿ ಧಾತೋ |
ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ || ೪ ||

ತ್ರಿಗುಣಾತೀತ ವಿಧಾರಕ ಪರಿತೋ ದೇಹಿ ಸುಭಕ್ತಿಮ್ |
ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ || ೫ ||

ಶರಣಂ ಕಾರಣ ಭಾವನ ಭವ ಮೇ ತಾತ ಸದಾಽಲಮ್ |
ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ || ೬ ||

ಮರಣ ಪ್ರಾಣದ ಪಾಲಕ ಜಗದೀಶಾವ ಸುಭಕ್ತಿಮ್ |
ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ || ೭ ||

ತರುಣಾ ದಿತ್ಯ ಸವರ್ಣಕ ಚರಣಾಬ್ಜಾ ಮಲ ಕೀರ್ತೇ |
ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ || ೮ ||

ಸಲಿಲಪ್ರೋತ್ಥ ಸರಾಗಕ ಮಣಿ ವರ್ಣೋಚ್ಚನ ಖಾದೇ |
ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ || ೯ ||

ಖಜತೂಣೀ ನಿಭ ಪಾವನ ವರ ಜಂಘಾಮಿತ ಶಕ್ತೇ |
ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ || ೧೦ ||

ಇಭ ಹಸ್ತಪ್ರಭ ಶೋಭನ ಪರಮೋರು ಸ್ಥರ ಮಾಲೇ |

ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ || ೧೧ ||

ಅಸನೋತ್ಫುಲ್ಲ ಸುಪುಷ್ಪಕ ಸಮವರ್ಣಾ ವರಣಾಂತೇ |

ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ || ೧೨ ||
ಶತ ಮೋದೋದ್ಭವ ಸುಂದರ ವರ ಪದ್ಮೋತ್ಥಿತ ನಾಭೇ |

ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ || ೧೩ ||
ಜಗದಾ ಗೂಹಕ ಪಲ್ಲವ ಸಮ ಕುಕ್ಷೇ ಶರಣಾದೇ |

ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ || ೧೪ ||
ಜಗದಂಬಾ ಮಲ ಸುಂದರ ಗೃಹವಕ್ಷೋ ವರ ಯೋಗಿನ್ |

ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ || ೧೫ ||
ದಿತಿಜಾಂತ ಪ್ರದ ಚಕ್ರದರ ಗದಾಯುಗ್ವರ ಬಾಹೋ |

ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ || ೧೬ ||
ಪರಮಜ್ಞಾನ ಮಹಾನಿಧಿ ವದನಶ್ರೀ ರಮಣೇಂದೋ |

ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ || ೧೭ ||
ನಿಖಿಲಾಘೌ ಘ ವಿನಾಶನ ಪರ ಸೌಖ್ಯ ಪ್ರದ ದೃಷ್ಟೇ

ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ || ೧೮ ||
ಪರಮಾನಂದ ಸುತೀರ್ಥ ಸುಮುನಿ ರಾಜೋ ಹರಿಗಾಥಾಮ್ |

ಕೃತವಾನ್ ನಿತ್ಯ ಸುಪೂರ್ಣಕ ಪರಮಾನಂದ ಪದೈಷೀ ||೧೯||
(ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ)

ಭಾವಪ್ರಕಾಶಿಕಾ ಮೆಟ್ಟಿಲೋತ್ಸವ ೨೦೨೬ ಹಾಡುಗಳು

31. ಆನಂದ ಮುಕುಂದ ಅರವಿಂದ ನಯನ

ಆನಂದ ಮುಕುಂದ ಅರವಿಂದ ನಯನ |
ಆನಂದತೀರ್ಥ ಪರಾನಂದ ವರದ || ೧ || 2X

ಸುಂದರಿ ಮಂದಿರ ಗೋವಿಂದ ವಂದೇ |
ಆನಂದತೀರ್ಥ ಪರಾನಂದ ವರದ || ೨ || 2X and go back to ಆನಂದ ಮುಕುಂದ

ಚಂದ್ರ ಸುರೇಂದ್ರ ಸುವಂದಿತ ವಂದೇ |
ಆನಂದತೀರ್ಥ ಪರಾನಂದ ವರದ || ೩ || 2X

ಚಂದ್ರಕ ಮಂದಿರ ನಂದಕ ವಂದೇ |
ಆನಂದತೀರ್ಥ ಪರಾನಂದ ವರದ ||೪ || 3x (1X HIGH & 2X LOW) and go back to ಆನಂದ ಮುಕುಂದ

ಮಂದಾರ ಸ್ಯಂದಕ ಸ್ಯಂದನ ವಂದೇ |
ಆನಂದತೀರ್ಥ ಪರಾನಂದ ವರದ || ೫ || 2X

ವೃಂದಾರಕ ವೃಂದ ಸುವಂದಿತ ವಂದೇ |
ಆನಂದತೀರ್ಥ ಪರಾನಂದ ವರದ || ೬ || 2X

ಮಂದಾರ ಸ್ಯಂದಿತ ಮಂದಿರ ವಂದೇ |
ಆನಂದತೀರ್ಥ ಪರಾನಂದ ವರದ || ೭ || 3x (1X HIGH & 2X LOW) and go back to ಆನಂದ ಮುಕುಂದ

ಮಂದಿರ ಸ್ಯಂದನ ಸ್ಯಂದಕ ವಂದೇ |
ಆನಂದತೀರ್ಥ ಪರಾನಂದ ವರದ || ೮ || 2X

ಇಂದಿರಾ ನಂದಕ ಸುಂದರ ವಂದೇ |
ಆನಂದತೀರ್ಥ ಪರಾನಂದ ವರದ || ೯ || 2X

ಆನಂದ ಚಂದ್ರಿಕಾ ಸ್ಯಂದನ ವಂದೇ |
ಆನಂದತೀರ್ಥ ಪರಾನಂದ ವರದ || ೧೦ || 3x (1X HIGH & 2X LOW) and go back to ಆನಂದ ಮುಕುಂದ

ಆನಂದ ಮುಕುಂದ ಅರವಿಂದ ನಯನ 2 lines 2x and end with 3x ಆನಂದತೀರ್ಥ ಪರಾನಂದ ವರದ

32. ಶ್ರೀ ಕೃಷ್ಣ ಗೋವಿಂದ ಹರೇ ಮುರಾರಿ ಹೇ ನಾಥ್ ನಾರಾಯಣ ವಾಸುದೇವ

ಶ್ರೀ ಕೃಷ್ಣ ಗೋವಿಂದ ಹರೇ ಮುರಾರಿ ಹೇ ನಾಥ್ ನಾರಾಯಣ ವಾಸುದೇವ
ಇಂದು ನಿನ್ನ ಮುಂದೆ ನಿಂತಿದ್ದೇನೆ .....ನನ್ನ ಜೀವವನ್ನೇ ಪ್ರಾರ್ಥನೆಯಾಗಿಸು

ನಿನ್ನೆಗಿಂತ ಇಂದು ನಾನು ಉತ್ತಮನಾಗಲಿ, ಇಂದಿಗಿಂತ ನಾಳೆ ಇನ್ನೂ ಶ್ರೇಷ್ಠನಾಗಲಿ
ನನ್ನ ಮಾತಿನಿಂದ ಯಾರಿಗೂ ನೋವಾಗದಿರಲಿ, ನನ್ನ ನಡತೆಯಿಂದ ಹೃದಯಗಳು ಅರಳಲಿ
ತಿಳಿದು ಮಾಡಿದ ತಪ್ಪುಗಳು ಕರಗಲಿ, ತಿಳಿಯದೆ ಮಾಡಿದ ನೋವುಗಳು ಕ್ಷಮೆಯಾಗಲಿ
ನನ್ನ ನೆರಳು ಕೂಡ ಶಾಂತಿ ತರಲಿ, ನನ್ನ ಬದುಕು ಯಾರಿಗಾದರೂ ಬೆಳಕಾಗಲಿ

ಹೇ ಕೃಷ್ಣಾ ಗೋವಿಂದ ಮುಕುಂದ ಮುರಾರಿ

ಕಲ್ಲಾದ ಮನಸಿಗೆ ಕರುಣೆ ತುಂಬು, ಅಹಂಕಾರದ ಕತ್ತಲೆಯನ್ನು ದೂರ ಮಾಡು
ಜನ್ಮದ ಅರ್ಥವನ್ನು ತಿಳಿಯುವ ಬುದ್ಧಿ ಕೊಡು
ಬಾಳುವುದನ್ನು ಕಲಿಸು.....ಕೇವಲ ಬದುಕುವುದಲ್ಲ

ಶ್ರೀ ಕೃಷ್ಣ ಗೋವಿಂದ ಹರೇ ಮುರಾರಿ, ಹೇ ನಾಥ ನಾರಾಯಣ ವಾಸುದೇವ

ನೀನೆ ಗತಿ ನೀನೆ ಶೃತಿ ನೀನೆ ಜಗದೋದ್ಧಾರಿ
ಸರ್ವೇ ಭವಂತು ಸುಖಿನಃ - ಎಲ್ಲರೂ ಸುಖವಾಗಿರಲಿ
ಸರ್ವೇ ಸಂತು ನಿರಾಮಯ - ಎಲ್ಲರೂ ಆರೋಗ್ಯವಾಗಿರಲಿ
ಸರ್ವೇ ಭದ್ರಾಣಿ ಪಶ್ಯಂತು - ಒಳ್ಳೆಯದನ್ನೇ ಕಾಣಲಿ
ಮಾ ಕಶ್ಚಿತ್ ದುಃಖ ಭಾಗಭವೇತ್ - ಯಾರಿಗೂ ದುಃಖಬಾರದಿರಲಿ

ಶ್ರೀ ಕೃಷ್ಣ ಗೋವಿಂದ ಹರೇ ಮುರಾರಿ, ಹೇ ನಾಥ ನಾರಾಯಣ ವಾಸುದೇವ

ಹಣವೇ ಜೀವನದ ಗುರಿಯಾಗದಿರಲಿ, ಮಾನವೀಯತೆ ನನ್ನ ಧರ್ಮವಾಗಿರಲಿ
ಊಟಕ್ಕಾಗಿ ಮಾತ್ರ ಬದುಕಾಗದಿರಲಿ, ಉದ್ದೇಶಕ್ಕಾಗಿ ಪ್ರತಿದಿನ ಉಸಿರಾಡಲಿ
ಕೆಟ್ಟ ಅಭ್ಯಾಸಗಳ ಬೆಸೆ ತುಂಡಾಗಲಿ, ಸುಳ್ಳು ನಂಬಿಕೆಗಳ ಮೋಡ ಕಳಚಲಿ
ಸತ್ಯದ ಬೆಳಕಿನಲ್ಲಿ ನಾನು ನಡೆಯಲಿ, ನನ್ನ ದಾರಿ ಇನ್ನೊಬ್ಬರಿಗೆ ದೀಪವಾಗಲಿ

ಹೇ ಕೃಷ್ಣಾ ಗೋವಿಂದ ಮುಕುಂದ ಮುರಾರಿ

ನೀನೆ ಉಸಿರು ನೀನೆ ನಂಬಿಕೆ ನೀನೆ ನನ್ನ ಆಧಾರ

ಸರ್ವೇ ಭವಂತು ಸುಖಿನಃ ಎಲ್ಲೆಡೆ ಪ್ರೀತಿ ಹರಡಲಿ
ಸರ್ವೇ ಸಂತು ನಿರಾಮಯ - ಮನದಲ್ಲಿ ಶಾಂತಿ ನೆಲೆಸಲಿ
ಸರ್ವೇ ಭದ್ರಾಣಿ ಪಶ್ಯಂತು - ಜಗವೆಲ್ಲ ಬೆಳಕಾಗಲಿ
ಮಾ ಕಶ್ಚಿತ್ ದುಃಖ ಭಾಗಭವೇತ್ - ಯಾರೂ ಒಂಟಿಯಾಗದಿರಲಿ

ಶ್ರೀ ಕೃಷ್ಣ ಗೋವಿಂದ ಹರೇ ಮುರಾರಿ, ಹೇ ನಾಥ ನಾರಾಯಣ ವಾಸುದೇವ

33. ಪ್ರಾತಃ ಗದ್ಯ (ಪುರಂದರ ದಾಸರು)

ಅನಂತ ಕೋಟಿ ಬ್ರಹ್ಮಾಂಡ ನಾಯಕ, ರಮಾ ಬ್ರಹ್ಮ ರುದ್ರೇಂದ್ರಾದಿ ವಂದ್ಯ,
ಭಕ್ತ ವತ್ಸಲ ಭವ ರೋಗ ವೈದ್ಯ, ಶರಣಾಗತ ವಜ್ರ ಪಂಜರ,
ಆಪತ್-ಬಾಂಧವ ಅನಾಥ ಬಂಧೋ, ಅನಿಮಿತ್ತ ಬಂಧೋ ಪತಿತ ಪಾವನ,
ಮಹಾರೋಗ ನಿವಾರಣ, ಮಹಾದುರಿತ ನಿವಾರಣ,
ಮಹಾಭಯ ನಿವಾರಣ, ಮಹಾಬಂಧ ವಿಮೋಚನ,
ಭಯಕೃತ್ಭಯ ವಿನಾಶನ, ಕೃಪಾವಾರಿಧಿ ದೇವ ದೇವೋತ್ತಮ,
ದೇವಶಿಖಾಮಣಿ, ಕಪಟ ನಾಟಕ ಸೂತ್ರಧಾರ,
ನಿತ್ಯರೋಳು ನಿತ್ಯ, ಸತ್ಯ ಸಂಕಲ್ಪ, ಮುಕ್ತಾಮುಕ್ತ ನಿಯಾಮಕ, ಮೋಕ್ಷಧರ,
ಸುವೈಕುಂಠ ಪತಿ, ವೈಕುಂಠ ವಿಹಾರಿ,
ತ್ರಿಧಾಮ ತ್ರಿಗುಣ ವರ್ಜಿತ, ಜಗದ್ಜನ್ಮಾದಿ ಕಾರಣ,
ಜಗತ್ಪತೇ ಜಗದತ್ಯಂತಭಿನ್ನ, ಜಗದೀಶ ಜಗದೋದ್ಧಾರ,
ಜಗತ್ಸ್ವಾಮಿ, ಜಗದ್ವಿಲಕ್ಷಣ, ಜಗನ್ನಾಥ, ವಿಶ್ವಕುಟುಂಬಿ ವಿರಾಟ ಮೂರ್ತಿ,
ಹೇ ಮಂಗಳಾಂಗ ಹೇ ಶುಭಾಂಗ, ಪರಮ ಮಂಗಳಮೂರ್ತಿ,
ಕೋಮಲಾಂಗ, ನೀಲ ಮೇಘ ಶ್ಯಾಮ,
ಇಂದು ವದನ ಬಹು ಸುಂದರ, ಇಂದಿರಾ ವಂದಿತ ಚರಣ,
ವೃಕೋದರ ವಂದ್ಯ, ಕೇಶವಾದಿ ರೂಪ,
ಅಜಾದಿ ರೂಪ, ವಿಶ್ವಾದಿ ರೂಪ, ಆತ್ಮಾದಿ ರೂಪ, ಅನಿರುದ್ಧಾದಿ ರೂಪ,
ಅನ್ನಮಯಾದಿ ರೂಪ, ಅನೇಕ ಮಂತ್ರ ಪ್ರತಿಪಾದ್ಯ,
ಸರ್ವ ಸಾರ ಭೋಕ್ತ, ಅಷ್ಟೈಶ್ವರ್ಯ ಪ್ರದಾತ,
ಓಂಕಾರ ಶಬ್ದವಾಚ್ಯ, ವಿಶಿಷ್ಟ ತಾರತಮ್ಯ ವಾಚ್ಯ,
ಅನಂತಾನಂತ ಶಬ್ದ ವಾಚ್ಯ, ಅಣುಮಹದ್ರೂಪ,
ಶಂಖ ಚಕ್ರ ಪೀತಾಂಬರ ಧಾರಿ, ಕಮಲಾಕ್ಷ ಕಮಲನಾಭ,
ವೈಜಯಂತಿ ವನಮಾಲಾ ಶೋಭಿತ, ಕೌಸ್ತುಭ ಭೂಷಿತ,
ಸುವರ್ಣ ವರ್ಣ, ನವರತ್ನ ಕುಂಡಲಧಾರಿ,
ಕಸ್ತೂರಿ ಶ್ರೀಗಂಧಲೇಪನ, ಗರುಡಾರೂಢ ಶೋಭಿತ,
ಕಾಮಧೇನು, ಶ್ರೀವತ್ಸಲಾಂಛನ, ಕಲ್ಪವೃಕ್ಷ, ಚಿಂತಾಮಣಿ,
ಕ್ಷೀರಾಬ್ಧಿ ಶಾಯಿ, ಶೇಷ ಶಾಯಿ, ವಟಪತ್ರ ಶಾಯಿ, ಖಗ ವಾಹನ,
ದೇಶ ಕಾಲ ಗುಣಾತೀತ, ಅನಂತ ಬ್ರಹ್ಮ ಅನಂತ ಶಕ್ತಿ,
ಅನಂತ ಮೂರ್ತಿ ಅನಂತ ಕೀರ್ತಿ, ಪುರಾಣ ಪುರುಷೋತ್ತಮ,
ಅಕ್ರೂರ ವರದ ಅಂಬರೀಶ ವರದ, ನಾರದ ವರದ ಪ್ರಹ್ಲಾದ ವರದ,
ಗಜೇಂದ್ರ ವರದ ಮುಚುಕುಂದ ವರದ, ಧ್ರುವ ವರದ ವಿಭೀಷಣ ವರದ,
ಕುಲಾಲ ಭೀಮ ಸಂರಕ್ಷಕ, ಪುಂಡಲೀಕ ವರದ ಪರಾಶರ ವರದ,
ಪಾರ್ಥ ಸಾರಥಿ ಪಾಪ ವಿದೂರ, ಅರಿಜನ ಪ್ರಚಂಡ,
ಚಾಣೂರ ಮಲ್ಲ ಮುಷ್ಟಿಕಾಸುರ ಮರ್ದನ, ಕಾಳಿಂದಿ ಕುಲವನ ಕಂಠಿರವ,

ಮದನ ಗೋಪಾಲ ವೇಣು ಗೋಪಾಲ, ವೇಣು ನಾದ ಪ್ರಿಯ,
ಷೋಡಶ ಸಹಸ್ರ ಗೋಪಿಕಾ ಪ್ರೀತಿ ವಿಲಾಸ, ಅಹಲ್ಯಾ ಶಾಪ ವಿನಾಶನ,
ದ್ರೌಪದಿ ಅಭಿಮಾನ ರಕ್ಷಕ, ದುಷ್ಟ ಜನ ಮರ್ಧನ,
ಶಿಷ್ಟ ಜನ ಪರಿಲಾಲನ, ಮುಕುಂದ ಮುರಾರೆ,
ಕಂಸಾರೆ ಅಸುರಾರೆ, ದೈತ್ಯ ಕುಲ ಸಂಹಾರ,
ಕ್ಷಾತ್ರ ಕುಲಾಂತಕ, ಸೋಮ ಕಾಸುರಾಂತಕ,
ಹಿರಣ್ಯಾಕ್ಷ ಹಿರಣ್ಯಕಶಿಪು ಸಂಹಾರ, ರಾವಣ ಕುಂಭಕರ್ಣ ಮರ್ಧನ,
ಶಿಶುಪಾಲ ದಂತವಕ್ತ್ರ ಶಿರಚ್ಛೇದನ, ರಘುಕುಲೋದ್ಭವ,
ದಶರಥ ಕೌಸಲ್ಯಾ ನಂದನ, ಸಿಂಧುರವರದ,
ಸೀತಾಪತೇ ಶ್ರೀ ರಾಮಚಂದ್ರ, ಯದುಕುಲೋತ್ಪನ್ನ,
ಯದುಕುಲೋದ್ಧಾರಿ, ಯದುಕುಲ ತಿಲಕ,
ಯದುಕುಲ ಶ್ರೇಷ್ಠ, ವಸುದೇವ ದೇವಕಿ ನಂದನ,
ಯಶೋದಕಂದ, ವೃಂದಾವನ ವಾಸಿ,
ಗೋಪ ಕುಮಾರ ಗೋಕುಲ ದ್ವಾರಕಾವಾಸಿ, ಗೋವರ್ಧನೋದ್ಧಾರಿ,
ಕಾಲಿಯ ಮರ್ಧನ, ಪೂತನಾ ಪ್ರಾಣಪಹಾರಿ,
ಶಕಟಾಸುರ ಮರ್ಧನ, ಪಾಂಡವ ಬಂಧೋ,
ಪಾಂಡವ ಪರಿಪಾಲ, ಪಾಂಡವ ಪ್ರಿಯ,
ಸುಧಾಮ ಸಖ, ರುಕ್ಮಿಣಿ ವಲ್ಲಭ,
ಸತ್ಯಭಾಮಾ ಪ್ರಿಯ, ಗೋಪಿಜನ ಜಾರ ನವನೀತ ಚೋರ,
ಗೋಪಾಲ ಕೃಷ್ಣ ಗಂಗಾ ಜನಕ, ಪ್ರಯಾಗ ಮಾಧವ,
ಕಾಶಿ ಬಿಂದು ಮಾಧವ, ಪಂಪಾಪತಿ ಗುಲುಗುಂಜಿ ಮಾಧವ,
ರಾಮೇಶ್ವರ ಸೇತು ಮಾಧವ, ಬದರಿ ನಾರಾಯಣ ಶ್ರೀರಂಗನಾಥ,
ವಡ್ಡಿ ಜಗನ್ನಾಥ, ಉಡುಪಿ ಶ್ರೀ ಕೃಷ್ಣ,
ಮೇಲುಕೋಟೆಯ ಚೆಲುವರಾಯ, ಬೇಲೂರ ಚೆನ್ನಿಗರಾಯ,
ಅಹೋಬಲ ನರಸಿಂಹ, ಪಾಂಡುರಂಗ ವಿಠಲ,
ಶ್ರೀ ಶೈಲ ನಿವಾಸ, ಅರುಣಾಚಲ ನಿಲಯ,
ವೃಷಭಾಚಲ ವಿಹಾರಿ, ಅನಂತ ಶಯನ,
ದರ್ಭ ಶಯನ, ಕಪಿಲ ಹಯಗ್ರೀವ ದತ್ತಾತ್ರೇಯ ಶಿಂಶುಮಾರ ಧನ್ವಂತರಿ,
ಮಮಸ್ವಾಮಿ ಸರ್ವ ಸ್ವಾಮಿ, ಜಗದಂತಯಾಮಿ,
ಜಗದೀಶ ಪ್ರಾಣೇಶ ದ್ವಿಜ ಫಣಿಪ ಮೃಢೇಶ, ಶ್ರೀರಮಣ ಭೂರಮಣ ದುರ್ಗಾರಮಣ,
ಶ್ರೀ ಲಕ್ಷ್ಮಿ ವೆಂಕಟರಮಣ, ಭಾರತಿರಮಣ ಮುಖ್ಯ ಪ್ರಾಣಾಂತರ್ಗತ,
ಸೀತಾಪತೇ ಶ್ರೀ ರಾಮಚಂದ್ರ, ಸಾಕ್ಷಾತ್ ಮನ್ಮಥ ಮನ್ಮಥ,
ಹರಿವಿಠಲ ಪುಂಡಲೀಕ ವರದ ಪಾಂಡುರಂಗ ವಿಠಲ, ಪುರಂದರ ವಿಠಲ